ಪುರುಷೋತ್ತಮ ಬಿಳಿಮಲೆ

ಜಾನಪದ ಕ್ಷೇತ್ರಕಾರ್ಯ

ಆಧುನಿಕ ವಿಧಾನಗಳು

ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ



ಜಾನಪದ ಕ್ಷೇತ್ರಕಾರ್ಯ

ಆಧುನಿಕ ವಿಧಾನಗಳು

ಪುರುಷೋತ್ತಮ ಬಿಳಿಮಲೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩೨೧೧

ಜಾನಪದ ಕ್ಷೇತ್ರಕಾರ್ಯ – ಆಧುನಿಕ ವಿಧಾನಗಳು : ಪುರುಷೋತ್ತಮ ಬಿಳಿಮಲೆ, ಪ್ರಾಧ್ಯಾಪ
ಜಾನಪದ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೫೮೩೨೧೧

ಪುಟ : ೨೮

ಎರಡನೇ ಮುದ್ರಣ ೧೯೯೩

ಬೆಲೆ : ಒಂದು ರೂಪಾಯಿ

ಮುಖಪುಟ ವಿನ್ಯಾಸ : ಜಿ. ಜಯಕುಮಾರ್

ಪ್ರಕಾಶಕರು : ನಿರ್ದೇಶಕ, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩೨೧೧

ಪುಸ್ತಕಗಳು ದೊರೆಯುವ ಸ್ಥಳ

ಬೆಂಗಳೂರು ಕಛೇರಿ
ಕನ್ನಡ ವಿಶ್ವವಿದ್ಯಾಲಯ
ಕೊಠಡಿ : ೨೧೧
ಎರಡನೆಯ ಮಹಡಿ
ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ
ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧

ಹಂಪಿ ಕಛೇರಿ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩೨೧೧
ಬಳ್ಳಾರಿ ಜಿಲ್ಲೆ

Janapada Kshetrakarya - Adhunika Vidhanagalu
Dr. Purushothama Bilimale, Professor, Department of folklo
Kannada University, Hampi - 583211 Second Impression 199

ಮುದ್ರಕರು : ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

೧. ಪ್ರವೇಶ

ಜಾನಪದ ಕ್ಷೇತ್ರ ಕಾರ್ಯದ ಕುರಿತು ಅಲ್ಪಸ್ವಲ್ಪ ಮಾಹಿತಿ ನೀಡುವ ಕೆಲವು ಗ್ರಂಥಗಳು ಅಲ್ಲಲ್ಲಿ, ಬೇರೆ ಬೇರೆ ಕಾಲದಲ್ಲಿ ಪ್ರಕಟವಾಗಿವೆ. ಜೊತೆಗೆ ಪ್ರಾಸಂಗಿಕವಾಗಿ ಕ್ಷೇತ್ರಕಾರ್ಯದ ಬಗ್ಗೆ ಹಲವರು ಅಲ್ಲಲ್ಲಿ ಚರ್ಚಿಸಿದ್ದಾರೆ. ಕನ್ನಡದಲ್ಲಿ ಸಿ.ಸಿ.ಎ.ಪೈ. ಅವರು ಕ್ಷೇತ್ರ ಕಾರ್ಯದ ಕುರಿತು ಪ್ರತ್ಯೇಕವಾದ ಒಂದು ಪುಸ್ತಕವನ್ನು ರಚಿಸಿದ್ದಾರೆ. ಅಂಬಳಿಕೆ ಹಿರಿಯಣ್ಣನವರು 'ಕ್ಷೇತ್ರ ಕಾರ್ಯದ ವ್ಯಾಪ್ತಿ ಮತ್ತು ಅಧ್ಯಯನ' ಎಂಬ ಕುರಿತು ಉಪಯುಕ್ತ ಲೇಖನವೊಂದನ್ನು ಬರೆದಿದ್ದಾರೆ. (1984) ಟಿ.ಎಸ್. ಸತ್ಯನಾಥರ ಲೇಖನ ಕ್ಷೇತ್ರ ಕಾರ್ಯದ ಕೆಲವು ತಾತ್ವಿಕ ಸಮಸ್ಯೆಗಳನ್ನು ಚರ್ಚಿಸುತ್ತದೆ (1988) ಇಂಗ್ಲಿಷಿನಲ್ಲಿ ಕೆನೆತ್ ಎಸ್ ಗೋಲ್ಡ್ ಸ್ಟೈನ್ (1964) ಬ್ರೂಸ್ ಜಾಕ್ಸನ್ (1987) ಮೊದಲಾದವರು ಬೃಹತ್ ಕೃತಿಗಳನ್ನು ರಚಿಸಿದ್ದಾರೆ. ಬಾಸ್ಕಂ (1953) ಬೌಮನ್ (1962) ಸಾಮ್ಯುವೆಲ್ ಬೆಯಾರ್ಡ್ (Bayard Samuel; P 1953) ಸಿ.ಎಸ್. ಬರ್ನೆ (Burne C.S. 1902), ವಿಲಿಯಂ ಕ್ರೂಕ್ (Crooke William 1902) ಡಾರ್ಸನ್ (Dorson Richard 1964) ಡಂಡೆಸ್ (Dundes Allan 1962) ಹರ್ಸ್ಕೊವಿಟ್ಸ್ (Herskovits MelveilleJ 1950) ಲೂವಿಸ್ ಜೋನ್ಸ್ (Jones Louis 1946) ಕ್ಲುಕೋನ್ (Kluekhohn Florence 1940) ಲೀಚ್ (Leach Mac Edward 1962) ಮಾರ್ಗರೇಟ್ ಮೀಡ್ (Mead Margaret 1933) ವೈಟ್ (Whyte WF 1951) ಮೊದಲಾದ ವಿದ್ವಾಂಸರು ಮಾನವ ಶಾಸ್ತ್ರ ಸಮಾಜ ಶಾಸ್ತ್ರ ಮತ್ತು ಜಾನಪದಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯ ನಡೆಸಬೇಕಾದ ರೀತಿಯ ಬಗೆಗೆ ತುಂಬ ಒಳ್ಳೆಯ ವಿವರಗಳನ್ನು ನೀಡಿದ್ದಾರೆ. ವೈಜ್ಞಾನಿಕ ಕ್ಷೇತ್ರ ಕಾರ್ಯ ನಡೆಸಬೇಕಾದ ಅಗತ್ಯದ ಕುರಿತು ಒತ್ತಿ ಹೇಳಿದ್ದಾರೆ.

ಕನ್ನಡದ ಸಂದರ್ಭದಲ್ಲಿ, ಜಾನಪದ ಅಧ್ಯಯನದ ಇತಿಹಾಸ 1871ರಷ್ಟು ಹಿಂದೆ ಹೋದರೂ ಕ್ಷೇತ್ರಕಾರ್ಯದ ದೃಷ್ಟಿಯಿಂದ ಅದಕ್ಕೆ ಆಧುನಿಕ ಆಯಾಮ ದೊರಕಿದ್ದು 1966ರಿಂದ ಈಚೆಗೆಂದೇ ಹೇಳಬಹುದು. 1966ರಲ್ಲಿ ಮೈಸೂರು ವಿಶ್ವವಿದ್ಯಾಲಯ ಏರ್ಪಡಿಸಿದ್ದ ಜನಪದ ಸಾಹಿತ್ಯ ಗೋಷ್ಠಿಯಲ್ಲಿ ಡಾ||ಹಾ.ಮಾ. ನಾಯಕರು ಮಂಡಿಸಿದ 'ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ' ಎಂಬ ಲೇಖನವೇ ಕನ್ನಡ ಜಾನಪದ ಅಧ್ಯಯನ ಕ್ಷೇತ್ರಕ್ಕೆ ಆಧುನಿಕತೆಯ ಸ್ಪರ್ಶವನ್ನು ಮಾಡಿದ್ದು. ಪ್ರೊ.ದೇ.ಜವರೇಗೌಡ ಮತ್ತು ಹಾ.ಮಾ. ನಾಯಕರ ದೂರದೃಷ್ಟಿಯ ಫಲವಾಗಿ ಅದೇ ವರ್ಷ ಸ್ನಾತಕೋತ್ತರ ಶಿಕ್ಷಣದಲ್ಲಿ ಜಾನಪದವೂ ಸೇರ್ಪಡೆಗೊಂಡಿತು. ಮರುವರ್ಷ ಅಂದರೆ 1967ರಲ್ಲಿ ಪ್ರೊ.ದೇ.ಜವರೇಗೌಡ ಅವರು ಜೀ.ಶಂ. ಪರಮಶಿವಯ್ಯ ಅವರ 'ಜನಪದ ಸಾಹಿತ್ಯ ಸಮೀಕ್ಷೆ' ಎಂಬ ಕೃತಿಗೆ ಬರೆದ ಮುನ್ನುಡಿಯೂ, ಇಲ್ಲಿ ಉಲ್ಲೇಖಾರ್ಹ. 1972 ರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಜಾನಪದ ಡಿಪ್ಲೊಮಾ ಶಿಕ್ಷಣ ಜಾರಿಗೆ ಬಂತು. 1974ರಿಂದ ಜಾನಪದ ಸ್ನಾತಕೋತ್ತರ ಪದವಿ ಶಿಕ್ಷಣವೂ

ಅಲ್ಲಿಯೇ ಆರಂಭವಾಯಿತು, ಹೀಗೆ ಕ್ರಮಕ್ರಮವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿಯೇ ಜಾನಪದ ಅಧ್ಯಯನವು ವೈಜ್ಞಾನಿಕವಾಗಿ ಆರಂಭವಾಯಿತು. ಈ ಕೆಲಸಕ್ಕೆ ಪೂರಕವಾಗಿ ಕರ್ನಾಟಕ ವಿಶ್ವವಿದ್ಯಾನಿಲಯವೂ ಜನಪದ ಸಾಹಿತ್ಯದಲ್ಲಿ ಎಂ.ಎ. ಶಿಕ್ಷಣವನ್ನು ಆರಂಭಿಸಿ, ಪ್ರತಿವರ್ಷ ಜಾನಪದ ಸಮ್ಮೇಳನಗಳನ್ನು ನಡೆಸಿ, ವೈಜ್ಞಾನಿಕ ಅಧ್ಯಯನಕ್ಕೆ ಚಾಲನೆ ನೀಡಿತು. ಉತ್ತರ ಕರ್ನಾಟಕದಿಂದ ಡಾ.ಬಿ.ಎಸ್. ಗದಗೀ ಮಠ (1951),ದಕ್ಷಿಣ ಕರ್ನಾಟಕದಿಂದ ಡಾ||ಜೀ.ಶಂ. ಪರಮಶಿವಯ್ಯ (1972) ಮತ್ತು ಕರಾವಳಿ ಕರ್ನಾಟಕದಿಂದ ಡಾ||ಬಿ.ಎ.ವಿವೇಕ ರೈ (1985) ಅವರು ತಮ್ಮ ಪಿಎಚ್.ಡಿ. ಮಹಾಪ್ರಬಂಧಗಳ ಮೂಲಕ ಜಾನಪದ ಅಧ್ಯಯನಕ್ಕೆ ಶೈಕ್ಷಣಿಕ ಮಹತ್ವಿಕೆಯನ್ನು ತಂದುಕೊಟ್ಟರು. ಮಾತ್ರವಲ್ಲ ಹೊಸ ತಲೆಮಾರಿನ ಸಂಶೋಧಕರಿಗೆ ಮಾರ್ಗದರ್ಶಕರಾಗಿ ಅಧ್ಯಯನದ ಹೊಸಹಾದಿಗಳನ್ನು ತೆರೆದು ತೋರಿಸಿದರು.

ಮೇಲೆ ನೀಡಲಾದ ವಿವರಗಳೆಲ್ಲವೂ ಜಾನಪದ ಕ್ಷೇತ್ರಕಾರ್ಯವನ್ನು ವೈಜ್ಞಾನಿಕವಾಗಿ ನಡೆಸಲು ಅನುವು ಮಾಡಿಕೊಟ್ಟ ಪ್ರಮುಖ ಕೆಲಸಗಳು. ಅಂದರೆ ಅವರೆಲ್ಲರೂ ಕ್ಷೇತ್ರಕಾರ್ಯದ ಬಗೆಗೆ ನೇರವಾದ ಮಾಹಿತಿ ನೀಡಿದ್ದಾರೆ ಎಂದು ಅರ್ಥವಲ್ಲ. ಅವರ ಕೆಲಸಗಳಲ್ಲಿ ವೈಜ್ಞಾನಿಕ ಕ್ಷೇತ್ರಕಾರ್ಯದ ರೀತಿಗಳು ಅಂತರ್ಗತವಾಗಿತ್ತು. ಮಾತ್ರವಲ್ಲ ಅಂಥ ಕೆಲಸಗಳು ಕ್ಷೇತ್ರಕಾರ್ಯದ ಬಗೆಗೆ ಸಾರ್ವತ್ರಿಕವಾಗಿ ಒಂದು ಬಗೆಯ ಎಚ್ಚರ ಮೂಡಿಸಿದವು.

ಈ ಬಗೆಯ ಎಚ್ಚರ ಮೂಡಿಕೆ ಒಂದು ಸಹಜ ಪ್ರಕ್ರಿಯೆ. ಏಕೆಂದರೆ ಜಾನಪದ ಅಧ್ಯಯನದಲ್ಲಿ ಕ್ಷೇತ್ರಕಾರ್ಯವು ಒಂದು ಅಗತ್ಯವಾದ ಮತ್ತು ಅನಿವಾರ್ಯ ಭಾಗ, ಮಾತ್ರವಲ್ಲ ಅತ್ಯಂತ ಮಹತ್ವದ ಭಾಗವೂ ಹೌದು. ಹಾಗಾಗಿಯೇ ಬಹಳ ಸಹಜವಾಗಿ ಮಾನವಿಕಗಳ ಸಾಲಿನಲ್ಲಿ ಇದನ್ನು ಕ್ಷೇತ್ರ ವಿಜ್ಞಾನ (Field Science) ಎಂದೇ ಕರೆಯಲಾಗುತ್ತಿದೆ. ಕ್ಷೇತ್ರಕಾರ್ಯದ ಮಾಹಿತಿಗಳಿಲ್ಲದೆ ಜಾನಪದವು ಒಂದು ಶಿಸ್ತಾಗಿ ಬೆಳೆಯಲು ಸಾಧ್ಯವೇ ಇಲ್ಲ, ಇತಿಹಾಸಕಾರನಿಗೆ ಚಾರಿತ್ರಿಕ ಆಕರಗಳು, ಸಾಹಿತ್ಯ ವಿಮರ್ಶಕನಿಗೆ ಕಲಾಕೃತಿಗಳು, ಮನಶ್ಶಾಸ್ತ್ರಜ್ಞನಿಗೆ ಮನುಷ್ಯರು ಹೇಗೋ ಹಾಗೆ ಜಾನಪದ ವಿದ್ವಾಂಸನಿಗೆ ಕ್ಷೇತ್ರದಿಂದ ತರುವ ಮಾಹಿತಿಗಳು ಬೇಕು. ಜನಪದ ವಿದ್ವಾಂಸನು ತಲುಪುವ ನೆಲೆ ಯಾವುದೇ ಇರಲಿ, ಆತ ಹೊರಡುವುದು ಮಾತ್ರ ಕ್ಷೇತ್ರದ ಮಾಹಿತಿಗಳ ಮೂಲಕವೇ ಆಗಿದೆ. ಜಾನಪದ ಅಧ್ಯಯನದಲ್ಲಿ ಮಾಹಿತಿಗಳ ಸಂಗ್ರಹವೇ ನಿರ್ಣಾಯಕವಾದುದು. ಈ ಹಿನ್ನೆಲೆಯಲ್ಲಿ ಜಾನಪದ ಕ್ಷೇತ್ರ ಕಾರ್ಯದ ರೀತಿ ನೀತಿಗಳ ಬಗ್ಗೆ ಪ್ರಸ್ತುತ ಪುಸ್ತಿಕೆಯಲ್ಲಿ ಚರ್ಚಿಸಲಾಗಿದೆ. ಕ್ಷೇತ್ರ ಕಾರ್ಯಕರ್ತನು ಎದುರಿಸಬೇಕಾದ ತಾತ್ವಿಕ ಸಮಸ್ಯೆಗಳು, ಕ್ಷೇತ್ರ ಕಾರ್ಯ ಪೂರ್ವ ತಯಾರಿ, ಕ್ಷೇತ್ರದಲ್ಲಿ ತೋರಬೇಕಾದ ಎಚ್ಚರ, ಕ್ಷೇತ್ರಕಾರ್ಯದ ಅನಂತರ ನಡೆಸಬೇಕಾದ ಕೆಲಸಗಳ ಕುರಿತು ಕೆಲವು ಪ್ರಾಥಮಿಕ ವಿವರಗಳನ್ನು ಇಲ್ಲಿ ನೀಡಲಾಗಿದೆ. ಇಷ್ಟಿದ್ದರೂ ಕ್ಷೇತ್ರ ಕಾರ್ಯದ ಬಗೆಗೆ ಸಿದ್ಧಪಡಿಸಿದ ಒಂದು ಲೇಖನ ಅಥವಾ ಕೈಪಿಡಿಯು ಅತ್ಯುತ್ತಮ ಕ್ಷೇತ್ರ ಕಾರ್ಯಕರ್ತನನ್ನು

ನಿಜವಾಗಿಯೂ ರೂಪಿಸುತ್ತದೆ ಎಂದು ಹೇಳಲಾಗದು. ಇದು ಈಜು ಕಲಿಸಿದ ಹಾಗೆ. ಈಜು ಕಲಿಕೆಯ ಎಲ್ಲ ವಿವರಗಳನ್ನು ತಿಳಿದಿರುವ ವ್ಯಕ್ತಿಯೊಬ್ಬನನ್ನು ನೀರಿಗೆ ದೂಡಿದಾಗ ಆತ ಖಂಡಿತಾ ಈಜಿಯಾನೆಂದು ಹೇಳಲು ಸಾಧ್ಯವಿಲ್ಲ. ಅದನ್ನು ಆತ ಅಭ್ಯಾಸದಿಂದಲೇ ಕಲಿತುಕೊಳ್ಳಬೇಕಾಗುತ್ತದೆ. ಈ ಕಲಿಕೆಗೆ ಕೈಪಿಡಿ ಒಂದು ಪ್ರೇರಕ ಶಕ್ತಿಯಾಗಬಹುದು ಅಷ್ಟೆ.

2. ಕ್ಷೇತ್ರ ಕಾರ್ಯದ ತಾತ್ವಿಕ ಸಮಸ್ಯೆಗಳು

ಕ್ಷೇತ್ರ ಕಾರ್ಯಕರ್ತನು ಮುಖ್ಯವಾಗಿ ಮೂರು ವಿಧದ ತಾತ್ವಿಕ ಪ್ರಶ್ನೆಗಳನ್ನು ಕ್ಷೇತ್ರಕಾರ್ಯಕ್ಕೆ ಮುನ್ನ ಕೇಳಿಕೊಳ್ಳಬೇಕಾಗುತ್ತದೆ. ಆ ಮೂರು ಪ್ರಶ್ನೆಗಳೆಂದರೆ :

2.1 ತನ್ನ ಪ್ರಕಾರ ಜಾನಪದ ಎಂದರೇನು?

2.2 ತನ್ನ ಸೈದ್ಧಾಂತಿಕ ತಿಳುವಳಿಕೆಯ ನೆಲೆಗಳಾವುವು?

2.3 ತನ್ನ ಅಧ್ಯಯನದ ವಿಧಾನಗಳಾವುವು?

2.1 ಜಾನಪದ ನಿರ್ವಚನೆಯ ಸಮಸ್ಯೆ

ಇಲ್ಲಿನ ಮೊದಲ ಸಮಸ್ಯೆಯು ಜಾನಪದದ ನಿರ್ವಚನೆ (Definition)ಯೊಂದಿಗೆ ಸಂಬಂಧ ಹೊಂದಿದೆ. ಜಾನಪದ ಎಂದರೇನೆಂಬುದನ್ನು ಕ್ಷೇತ್ರ ಕಾರ್ಯಕರ್ತನು ಸ್ಪಷ್ಟಪಡಿಸಿಕೊಳ್ಳದೇ ಹೋದರೆ; ಅವನ ಕಾರ್ಯ ಕ್ಷೇತ್ರದ ವ್ಯಾಪ್ತಿಯೇ ಅವನಿಗೆ ತಿಳಿಯಲಾರದು. ಇಂದು ಜಾನಪದವು ಒಂದು ಪ್ರತ್ಯೇಕ ಅಧ್ಯಯನ ಶಿಸ್ತಾಗಿ ರೂಪುಗೊಂಡಿರುವುದು ಹೌದಾದರೂ, ಜಾನಪದ ಎಂದರೇನೆಂಬುದನ್ನು ಸೂತ್ರೀಕರಿಸಿ ಹೇಳಲಾಗಿಲ್ಲ. ಈಗ ಲಭ್ಯವಿರುವ ಸುಮಾರು 30ಕ್ಕೂ ಹೆಚ್ಚು ನಿರ್ವಚನೆಗಳಲ್ಲಿ ಜಾನಪದದ ಸ್ವರೂಪ ಮತ್ತು ವ್ಯಾಪ್ತಿಯ ಬಗೆಗೆ ಒಮ್ಮತವಿಲ್ಲ. ಕೆಲವರು ಮಾನವಶಾಸ್ತ್ರದ ದೃಷ್ಟಿಯಿಂದ ಜಾನಪದವನ್ನು ನಿರ್ವಚಿಸಿದರೆ ಕೆಲವರು, ಸಾಂಸ್ಕೃತಿಕ ದೃಷ್ಟಿಕೋನದಿಂದ ನಿರ್ವಚಿಸಿದ್ದಾರೆ. ಇತ್ತೀಚೆಗೆ ಫಿನ್ಲೆಂಡಿನ ವಿದ್ವಾಂಸರು ಜಾನಪದದ ಕಾರ್ಯವನ್ನು ಗಮನಿಸಿ ಜಾನಪದವನ್ನು ವ್ಯಾಖ್ಯಾನಿಸಿ, ಜಾನಪದ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿದ ನಿರ್ವಚನೆಗಳನ್ನು ತಿರಸ್ಕರಿಸಿದ್ದಾರೆ. ಇಲ್ಲಿ ಸದ್ಯಕ್ಕೆ ಯಾವುದು ಸರಿಯಾದ ನಿರ್ವಚನೆ ಎಂಬುದು ಮುಖ್ಯವಲ್ಲ. ಬದಲು ಪ್ರತಿ ನಿರ್ವಚನೆಯು ಕ್ಷೇತ್ರದಲ್ಲಿನ ಆಕರ ಸಾಮಗ್ರಿಗಳನ್ನು ನೋಡುವುದಕ್ಕೆ ಒಂದು ಚೌಕಟ್ಟನ್ನು ಒದಗಿಸುತ್ತದೆ ಎಂಬುದು ಮುಖ್ಯ. ಅಂದರೆ, ಜಾನಪದ ಎಂದರೇನೆಂಬುದನ್ನು ನಾವು ಗ್ರಹಿಸಿಕೊಳ್ಳುವ ರೀತಿಗೂ ಕ್ಷೇತ್ರಕಾರ್ಯದಿಂದ ನಾವು ತರುವ ಮಾಹಿತಿಗೂ ಸಂಬಂಧವಿರುತ್ತದೆ. ಜಾನಪದ ನಿರ್ವಚನೆಯೇ ಆ ಕ್ಷೇತ್ರವು ಒಳಗೊಳ್ಳಬೇಕಾದ ಮಾಹಿತಿಗಳಿಗೆ ಒಂದು ದಿಕ್ಸೂಚಿ. ಹಾಗಾಗಿ ಕ್ಷೇತ್ರ

ಕಾರ್ಯಕರ್ತನು ಕ್ಷೇತ್ರಕ್ಕೆ ಹೋಗುವ ಮುನ್ನ ಜಾನಪದದ ನಿರ್ವಚನೆಯ ಬಗೆಗಣ ತನ್ನ ನಿಲುವನ್ನು ಖಚಿತಪಡಿಸಿಕೊಳ್ಳುವುದು ಅಗತ್ಯ.

2.2 ಜಾನಪದ : ಸೈದ್ಧಾಂತಿಕ ನೆಲೆಗಳ ಸಮಸ್ಯೆ

ಕ್ಷೇತ್ರ ಕಾರ್ಯಕರ್ತನು ಮುಖಾಮುಖಿಯಾಗಬೇಕಾದ ಎರಡನೆಯ ಸಮಸ್ಯೆಯು ಆತನ ಸೈದ್ಧಾಂತಿಕ ಸಮಸ್ಯೆಯೊಡನೆ ಸಂಬಂಧ ಹೊಂದಿದೆ. ವಾಸ್ತವವಾಗಿ ನಾವು ಕ್ಷೇತ್ರದಿಂದ ತರುವ ವಿಷಯಗಳು ನಮ್ಮ ಸೈದ್ಧಾಂತಿಕ ನಿಲುವಿಗೆ ಅನುಗುಣವಾಗಿಯೇ ಇರುತ್ತದೆ. ಒಂದು ನಿರ್ದಿಷ್ಟ ಸಿದ್ಧಾಂತಕ್ಕೆ ಬದ್ಧವಾಗುವುದೆಂದರೆ ಕ್ಷೇತ್ರಕಾರ್ಯಕ್ಕೆ ಒಂದು ಚೌಕಟ್ಟನ್ನು ಹಾಕಿಕೊಳ್ಳುವದೆಂದೇ ಅರ್ಥ. ಕೆಲವರು ಇದನ್ನು ಪೂರ್ವಗ್ರಹವೆಂದು ಕರೆದು "ಇದು ವಸ್ತುನಿಷ್ಠ ಅಧ್ಯಯನಕ್ಕೆ ಮಾರಕ" ಎಂದು ವಾದಿಸುತ್ತಾರೆ. ಆದರೆ ನಿಜವಾಗಿಯೂ ಇದು ಪೂರ್ವಗ್ರಹ ಅಲ್ಲ. ಬದಲು ಸಮಸ್ಯೆಗಳನ್ನು ಪೂರ್ವಭಾವಿಯಾಗಿ ತರ್ಕಿಸಿಕೊಳ್ಳುವ ವೈಜ್ಞಾನಿಕ ಕ್ರಮ ಎಂದು ಭಾವಿಸಬೇಕು. ಹೀಗಾಗಿ 'ವಸ್ತುನಿಷ್ಠ' ಎಂಬ ಆಕರ್ಷಕ ಪದದಡಿಯಲ್ಲಿ ಎಲ್ಲವನ್ನು ಸ್ವಲ್ಪ ಸ್ವಲ್ಪ ಸಂಗ್ರಹಿಸುತ್ತ ಯಾವುದೇ ಸೈದ್ಧಾಂತಿಕ ಚೌಕಟ್ಟಿನ ಅವಶ್ಯಕತೆಯನ್ನು ಇಡಿಯಾಗಿ ಪೂರೈಸಲಾಗದ ಸ್ಥಿತಿಗಿಂತ, ಸಿದ್ಧಾಂತ ಒಂದಕ್ಕೆ ಪ್ರಾಮಾಣಿಕವಾಗಿ ಬದ್ಧವಾಗುತ್ತಾ ತನ್ನ ವೈಚಾರಿಕ ಚೌಕಟ್ಟನ್ನು ಕ್ಷೇತ್ರ ಕಾರ್ಯದ ಮಾಹಿತಿಗಳ ಮೂಲಕ ಪರೀಕ್ಷಿಸಿ ನೋಡುವ ಕೆಲಸವೇ ಹೆಚ್ಚು ಉಪಯುಕ್ತವಾದುದು.

ಉದಾಹರಣೆಗೆ, ಜಾನಪದವನ್ನು ರಚನೆಯ ದೃಷ್ಟಿಯಿಂದ (Structure) ವಿಶ್ಲೇಷಿಸಬಯಸುವನು ಬಹುಮಟ್ಟಿಗೆ ಒಂದು ಸೀಮಿತ ಅರ್ಥದ ಜನಪದ ಪಠ್ಯಗಳನ್ನು ಸಂಗ್ರಹಿಸಿದರೆ ಸಾಕಾಗುತ್ತದೆ. ಒಂದು ಗಾದೆ, ಅಥವಾ ಒಂದು ಕಥೆ ಅವರಿಗೆ ಸಿಕ್ಕಿದರೆ ಸಾಕಾಗುತ್ತದೆ. ಯಾಕೆಂದರೆ, ಅವನಿಗೆ ಪಠ್ಯವೊಂದರ ಕನಿಷ್ಠತಮ ಘಟಕಗಳ ಮೊತ್ತ ಅಧ್ಯಯನಕ್ಕೆ ಸಾಕಾಗುತ್ತದೆ. ಪ್ರಾಪ್ ಅವರ ರೂಪರಚನಾತ್ಮಕ ಅಧ್ಯಯನವನ್ನು (Morphological)ಇಲ್ಲಿ ನೆನಪಿಸಿಕೊಳ್ಳಬಹುದು. ಲೆವಿಸ್ಟ್ರಾಸ್ ಅವರು ಪ್ರಾಪ್‌ಗಿಂತ ಭಿನ್ನವಾದ ನಿರ್ಣಯಗಳಿಗೆ ತಲುಪಿದರೂ ಅವರೂ ಪಠ್ಯವೊಂದರ ರೂಪವನ್ನು ಮಾತ್ರ ಗಮನಿಸುವುದನ್ನು ಮರೆಯಬಾರದು. ಗ್ರೀಮಾಸ್, ಬ್ರೆಮಾಂಡ್, ಜಾಕಬ್‌ಸನ್, ಸೆಬಿಯಾಕ್ ಜಾಕಬ್, ಮರಾಂಡ, ಡಂಡೆಸ್ ಮೊದಲಾದವರು ರಾಚನಿಕ ಅಧ್ಯಯನವನ್ನು ಕೈಗೊಂಡಾಗ ಪಠ್ಯವನ್ನೇ ಅಂತಿಮವಾಗಿ ಇರಿಸಿಕೊಂಡಿದ್ದಾರೆ. ಇಲ್ಲಿ ರಾಚನಿಕ ಅಧ್ಯಯನಕ್ಕಾಗಿ ಸಂಗ್ರಹಿಸಿದ ಪಠ್ಯಗಳನ್ನು ಚಾರಿತ್ರಿಕ ಭೌಗೋಳಿಕ ವಿಧಾನಕ್ಕೆ ಉಪಯೋಗಿಸಿಕೊಳ್ಳಲಾಗುವುದಿಲ್ಲ, ಯಾಕೆಂದರೆ ಚಾರಿತ್ರಿಕ ಭೌಗೋಳಿಕ ವಿಧಾನವು ಕ್ಷೇತ್ರದಿಂದ ಬಯಸುವ ಮಾಹಿತಿಗಳೇ ಬೇರೆ. ಫಿನ್ಲೆಂಡಿನ ಜೂಲಿಯಾಸ್ ಕ್ರಾಹ್ನ ಮತ್ತು ಕಾರ್ಲೇಕ್ರಾಹ್ನ ಅವರು ತಮ್ಮ ಪ್ರಸಿದ್ಧವಾದ ಚಾರಿತ್ರಿಕ ಭೌಗೋಳಿಕ (Finnish) ವಿಧಾನವನ್ನು ಮಂಡಿಸುವಾಗ ಅವರು ಕಥೆಗಳ ಬೇರೆ ಬೇರೆ ಪಾಠಗಳನ್ನು ಸಂಗ್ರಹಿಸಿಕೊಂಡರು ಎಂಬುದು ಅತ್ಯಂತ ಮಹತ್ವದ ವಿಚಾರ. ನಿರ್ದಿಷ್ಟ ಕತೆಯ ಜೀವನ ಚರಿತ್ರೆಯನ್ನು ನಿರ್ಧರಿಸುವಾಗ ಚಾರಿತ್ರಿಕ-ಭೌಗೋಳಿಕ ವಿಧಾನದ

ಅಧ್ಯಯನಕಾರರಿಗೆ ಅಸಂಖ್ಯ ಭಿನ್ನ ರೂಪಗಳಲ್ಲಿ ದೊರಕುವ ಒಂದು ಕತೆ, ಒಂದು ನಿರ್ದಿಷ್ಟಕಾಲ ಮತ್ತು ಸ್ಥಳದಲ್ಲಿ ಉದ್ದೇಶ ಪೂರ್ವಕವಾಗಿ ರಚಿತವಾಗಿರಬೇಕು, ಮತ್ತು ಅದು ಹುಟ್ಟಿದ ಸ್ಥಳದಿಂದ ಬೇರೆಡೆಗೆ ಪ್ರಸರಣ ಹೊಂದಿರಬೇಕು ಎಂಬ ತಿಳುವಳಿಕೆ ಬೇಕಾಗುತ್ತದೆ. ಇದಕ್ಕಾಗಿ ಆತ ಭಿನ್ನರೂಪಗಳ ಸಂಗ್ರಹವನ್ನು ಒಟ್ಟುಗೂಡಿಸಿಕೊಳ್ಳುತ್ತಾನೆ. ಅಂಥ ಸಂಗ್ರಹವನ್ನು ಪ್ರಾದೇಶಿಕ ಕ್ರಮದಲ್ಲೂ ಗ್ರಂಥಸ್ಥ ಮೂಲದಿಂದಾದರೆ ಕಾಲಾನುಗುಣವಾಗಿಯೂ ಜೋಡಿಸಿಕೊಳ್ಳಬೇಕು. "ಪ್ರತಿಯೊಂದು ಭಿನ್ನರೂಪ ಯಾವಾಗ ಸಂಗ್ರಹವಾಯಿತು, ಎಲ್ಲಿ ಸಂಗ್ರಹವಾಯಿತು ಎಂಬುದನ್ನು ಸರಿಯಾಗಿ ಗುರುತಿಸಬೇಕು. ಆಯಾ ಪ್ರದೇಶದಲ್ಲಿ ದೊರಕುವ ಪ್ರತಿಯೊಂದು ಪಾಠದ ಸ್ವಬಾವ ಲಕ್ಷಣದ ಶೇಕಡಾವಾರು ಪ್ರಮಾಣವನ್ನು ಕಂಡುಕೊಳ್ಳಬೇಕು. ಅಲ್ಲದೆ ಎಲ್ಲ ಭಿನ್ನ ರೂಪಗಳನ್ನು ಪ್ರಾದೇಶಿಕ ವಿವರಗಳೊಂದಿಗೆ ಪಟ್ಟಿ ಮಾಡಿಕೊಂಡು, ಸಂಕ್ಷಿಪ್ತ ಹೆಸರಿನಿಂದ ಗುರುತುಹಾಕಿಕೊಳ್ಳಬೇಕು." (ಹಿರಿಯಣ್ಣ ಅಂಬಳಿಕೆ 1984 : 54) ಈ ವಿವರಗಳು ರಾಚನಿಕ ಅಧ್ಯಯನಕಾರನಿಗೆ ಅನುಪಯುಕ್ತ ಅಥವಾ ರಾಚನಿಕ ಅಧ್ಯಯನಕಾರನಿಗೆ ಸಿಕ್ಕಿದ ವಿವರಗಳು ಚಾರಿತ್ರಿಕ ಭೌಗೋಳಿಕ ವಿಧಾನದ ಅಧ್ಯಯನಕಾರನಿಗೆ ಸಾಕಾಗುವುದಿಲ್ಲ. ಜನಪದ ಪ್ರಕಾರವೊಂದರ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ಬೃಹತ್ ಪಠ್ಯವನ್ನು ಗುರುತು ಹಾಕಿಕೊಂಡು ಅಧ್ಯಯನ ಮಾಡುವಾತನಿಗೆ ಒಂದು ಪಠ್ಯದ ಸಾಂದರ್ಭಿಕ ವಿವರಗಳೇ ಬಹು ಮುಖ್ಯವೆನಿಸುತ್ತದೆ. ಡಾ.ಕೆ.ಚಿನ್ನಪ್ಪ ಗೌಡರು 'ಕರ್ಂಗೋಲು ಕುಣಿತ'ದ ಬಗ್ಗೆ ಸಂಗ್ರಹಿಸುವಾಗ ಈ ಬಗೆಯ ಸಾಂದರ್ಭಿಕ ವಿವರಗಳನ್ನು ಕ್ಷೇತ್ರದಿಂದ ಸಂಗ್ರಹಿಸಿದ್ದಾರೆ. ಅವರೇ ಹೇಳುವ ಮಾತುಗಳು ಇದನ್ನು ಸ್ಪಷ್ಟಪಡಿಸುತ್ತವೆ." ಕರ್ಂಗೋಲು ಹಾಡು, ಕರ್ಂಗೋಲು ಪ್ರದರ್ಶನದ ವಿವರಗಳು, ಸಾಮೂಹಿಕ ಭೋಜನ ಮತ್ತು ಪ್ರಸಾದ ವಿತರಣೆ, ಕಾಣದ ಕಾಟದ ಮತ್ತು ಐತಿಹಾಸಿಕತೆ, ಪೂರಕವಾಗುವ ಇತರ ಮಾಹಿತಿಗಳು-ಕರ್ಂಗೋಲು ಪ್ರದರ್ಶನದ ಕುರಿತಂತೆ ಮೇಲಿನ ಶೀರ್ಷಿಕೆಗಳಲ್ಲಿ ಸಂಗ್ರಹಿಸಿರುವ ಮಾಹಿತಿ ಶರೀರವನ್ನು ನಾನು 'ಕರ್ಂಗೋಲು ಪಠ್ಯ' ಎಂದು ಕರೆಯುತ್ತೇನೆ. ಅಂದರೆ ಕರ್ಂಗೋಲು ಪ್ರದರ್ಶನದ ಅರ್ಥವನ್ನು ಹಾಡಿನಲ್ಲಿ, ಕುಣಿತದಲ್ಲಿ, ವೇಷಭೂಷಣದಲ್ಲಿ, ಸಂಪ್ರದಾಯಗಳಲ್ಲಿ, ಐತಿಹಾಸಿಕತೆಯಲ್ಲಿ ಸಾಮಾಜಿಕತೆಯಲ್ಲಿ ಮತ್ತು ಅವುಗಳ ಅಖಂಡತೆಯಲ್ಲಿ ಶೋಧಿಸಬೇಕಾಗುತ್ತದೆ. ಆದುದರಿಂದ ಯಾವುದೇ ಒಂದು ಪ್ರದರ್ಶನದ ಆಚೆಗಿನ ಸಾಮಾಜಿಕ, ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ವಿವರಗಳಲ್ಲಿ ಅದರ ಅರ್ಥ ಹುದುಗಿರುವ ಸಾಧ್ಯತೆಗಳು ಬಲವಾಗಿವೆ. (1989) 'ಕಂಬುಲ ಆಟವೋ ಆಚರಣೆಯೋ' ಎಂಬ ಲೇಖನವನ್ನು ಬರೆಯುವ ಸಂದರ್ಭದಲ್ಲಿ ನಾನು ಕೂಡಾ ಇಂಥ ಪ್ರಯತ್ನವೊಂದನ್ನು ಮಾಡಿದ್ದೇನೆ. (1990) ಕಂಬುಲದ ಹಿಂದಿನ ದಿನ ಮತ್ತು ಅದರ ಮುಂದಿನ ದಿನಗಳಲ್ಲಿ ನಡೆಯುವ ಕಾರ್ಯಕ್ರಮಗಳನ್ನು ದಾಖಲಿಸಿಯೇ ಕಂಬುಲದ ಬಗೆಗೆ ತೀರ್ಮಾನಗಳನ್ನು ಕೊಡಲು ಪ್ರಯತ್ನಿಸಿದ್ದೇನೆ. ಇದೇ ರೀತಿ ಮನಶ್ಶಾಸ್ತ್ರೀಯ ಸಿದ್ಧಾಂತ, ಕ್ರಿಯಾನಿಷ್ಠ ಸಿದ್ಧಾಂತ, ಪ್ರದರ್ಶನ ಸಿದ್ಧಾಂತ ಮೊದಲಾದವುಗಳು ಆಯಾ ಸಿದ್ಧಾಂತಕ್ಕೆ ಅನುಗುಣವಾದ ಮಾಹಿತಿ ಶರೀರವನ್ನು ಮಾತ್ರ ಬಯಸುತ್ತವೆ. ಅಂತರ್‌ಶಿಸ್ತಿನ ಅಧ್ಯಯನವಾದರೆ ಇನ್ನು ವ್ಯಾಪಕವಾದ

ಬೃಹತ್ ಮಾಹಿತಿ ಶರೀರವನ್ನು ಬಯಸಬಹುದು. ಇದರೆಲ್ಲದರ ಅರ್ಥ ಇಷ್ಟೆ : ಕ್ಷೇತ್ರ ಕಾರ್ಯಕರ್ತನಿಗೆ ಸೈದ್ಧಾಂತಿಕ ಗ್ರಹಿಕೆ ಅತ್ಯಗತ್ಯ. ಸೈದ್ಧಾಂತಿಕ ಗ್ರಹಿಕೆಯಿಲ್ಲದೆ ಆತ ನಡೆಸುವ ಕ್ಷೇತ್ರ ಕಾರ್ಯದಿಂದ ಉಪಯುಕ್ತ ಮಾಹಿತಿಗಳು ದೊರೆಯುವುದು ಕಷ್ಟ ಸಾಧ್ಯ. ಆ ವಿಧದ ಗ್ರಹಿಕೆಯಿಲ್ಲದ ವ್ಯಕ್ತಿಯೊಬ್ಬನು ಕ್ಷೇತ್ರದಿಂದ ತರುವ ಮಾಹಿತಿಗಳು ಪಾರ್ಶ್ವಿಕವಾಗಿದ್ದು, ಅದು ಯಾರೊಬ್ಬರ ಅಗತ್ಯವನ್ನು ತೀರಿಸದೇ ಹೋಗಬಹುದು. ಹೀಗಾಗಿ ಕ್ಷೇತ್ರಕಾರ್ಯಕರ್ತನು ತನ್ನ ಸೈದ್ಧಾಂತಿಕ ಸಮಸ್ಯೆಗಳ ಬಗ್ಗೆ ಒಂದು ಬಗೆಯ ಖಚಿತ ನಿಲುವುಗಳನ್ನು ಇಟ್ಟುಕೊಳ್ಳುವುದು ಅಗತ್ಯ.

2.3 ಕ್ಷೇತ್ರ ಕಾರ್ಯ ವಿಧಾನದ ಸಮಸ್ಯೆ

ಕ್ಷೇತ್ರ ಕಾರ್ಯಕರ್ತನು ತನ್ನ ಕ್ಷೇತ್ರಕಾರ್ಯ ವಿಧಾನದ ಬಗೆಗೂ ಒಂದು ಬಗೆಯ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿರುವುದು ಅಗತ್ಯ. ಇಲ್ಲಿ 'ಕ್ಷೇತ್ರಕಾರ್ಯ ವಿಧಾನ' ಎಂಬ ಮಾತನ್ನು ಸಂಶೋಧಕನು ಬಳಸುವ ತಾಂತ್ರಿಕ ಸಾಮಗ್ರಿಗಳನ್ನು ಗಮನದಲ್ಲಿರಿಸಿಕೊಂಡು ಬಳಸಲಾಗಿದೆ. ಸಂಶೋಧಕನು ತಾನು ಜಾನಪದವನ್ನು ನಿರ್ವಚಿಸಿಕೊಂಡ ಹಾಗೆಯೇ, ತಾಂತ್ರಿಕ ಸಾಮಗ್ರಿಗಳೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಜಾನಪದವನ್ನು ನಿರ್ವಚಿಸಿಕೊಳ್ಳುತ್ತವೆ. ಟೇಪ್‌ರೆಕಾರ್ಡರ್ ಧ್ವನಿಯನ್ನು ಮಾತ್ರ ಕೇಳಿಸಬಲ್ಲದು, ಆದರೆ ವೀಡಿಯೋ ಧ್ವನಿ ಮತ್ತು ಚಿತ್ರವನ್ನು ತೋರಿಸಬಲ್ಲದು. ಕ್ಯಾಮರಾ ತನ್ನ ಚೌಕಟ್ಟಿನೊಳಗೆ ಧ್ವನಿರಹಿತ ಚಿತ್ರವನ್ನು ಮಾತ್ರ ನೀಡಬಲ್ಲದು. ಆಯಾ ಮಾಧ್ಯಮಗಳು ಅವಕ್ಕೆ ಅನುಗುಣವಾದ ರೀತಿಯಲ್ಲಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಂಡೇ ಸಂಶೋಧಕನು ಅವನ್ನು ಹೇಗೆ ಬೇಕೋ ಹಾಗೆ, ತನ್ನ ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಳ್ಳಬೇಕಾಗುತ್ತದೆ. ಇಲ್ಲಿ ಸಂಶೋಧಕನಿಗೆ ಸ್ವಲ್ಪ ಎಚ್ಚರ ತಪ್ಪಿದರೂ ಸಾಕು, ತಾಂತ್ರಿಕ ಸಾಮಗ್ರಿಗಳೇ ಸಂಶೋಧಕನ ಮೇಲೆ ಹಿಡಿತ ಸಾಧಿಸುತ್ತವೆ. ಈ ಮಾತು ಸಂಶೋಧಕನು ಸಿದ್ಧಪಡಿಸಿಕೊಳ್ಳುವ ಪ್ರಶ್ನಾವಳಿಗೂ ಅನ್ವಯವಾಗುತ್ತದೆ. ವಿಷಯ ಸಂಗ್ರಹಣೆಗೆಂದು ನಾವು ಸಿದ್ಧಪಡಿಸಿಕೊಳ್ಳುವ ಪ್ರಶ್ನಾವಳಿಗಳೇ, ವಿಷಯ ಸಂಗ್ರಹಣೆಗೆ ತೊಡಕಾಗಿಯೇ ಪರಿಣಮಿಸಬಹುದು. ಇದಕ್ಕಾಗಿ ಸಂಶೋಧಕನಿಗೆ ಅವುಗಳ ಮೇಲೆ ಬಲವಾದ ಹಿಡಿತ ಅತ್ಯಗತ್ಯ.

ಕ್ಷೇತ್ರಕಾರ್ಯ ವಿಧಾನಕ್ಕೆ ಸಂಬಂಧಿಸಿದಂತೆ ಸಂಶೋಧಕನು ಖಚಿತಪಡಿಸಿಕೊಳ್ಳಲೇಬೇಕಾದ ಇನ್ನೆರಡು ಅಂಶಗಳೆಂದರೆ ವೀಕ್ಷಣೆ ಮತ್ತು ಸಂದರ್ಶನ. ಇವುಗಳ ಬಗೆಗೆ ಮಾನವ ಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು, ಮನಶ್ಶಾಸ್ತ್ರಜ್ಞರು, ಭಾಷಾಶಾಸ್ತ್ರಜ್ಞರೆಲ್ಲ ಬಗೆಬಗೆಯಾದ ವಿವರಣೆಯನ್ನು ನೀಡಿದ್ದಾರೆ. ಆದರೆ ಜನಪದ ವಿದ್ವಾಂಸರು ಇವುಗಳ ಬಗೆಗೆ ಅಷ್ಟಾಗಿ ಗಮನಹರಿಸಿಲ್ಲ, ಅವರು ಹೆಚ್ಚಾಗಿ ಇತರ ಶಾಸ್ತ್ರಗಳಿಂದಲೇ ಪ್ರೇರಣೆ ಪಡೆದುಕೊಂಡಿದ್ದಾರೆ.

ವೀಕ್ಷಣೆಯ ಸಂದರ್ಭದಲ್ಲಿ ಸಂಶೋಧಕನು ತಾನು ಕಂಡದ್ದೆಲ್ಲವನ್ನು ಅತ್ಯಂತ ಸೂಕ್ಷ್ಮವಾಗಿ ದಾಖಲು ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ದಾಖಲು ಮಾಡಬೇಕಾದರೆ, ತಾನು ತನ್ನನ್ನು ನೋಡುತ್ತಿದ್ದಂತೆಯೇ ಅವರಿಂದ ಒಂದು ಬಗೆಯ ಅಂತರವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಆದರೆ ಈ ಅಂತರ ಜಾಸ್ತಿಯಾದಂತೆ, ಅವನಿಗೆ ಸಿಗುವ ವಿವರಗಳು ಕಡಿಮೆಯಾಗುತ್ತ ಹೋಗುತ್ತವೆ. ಹಾಗೆಂದು ಆತ ಪಂಚೇಂದ್ರಿಯಗಳ ಮೂಲಕ ನಡೆವ ವಿವರಗಳಲ್ಲಿ ಪೂರ್ಣವಾಗಿ ಮಗ್ನವಾಗಿಬಿಟ್ಟರೆ ಆಗ ಅವನೊಳಗಿನ ಸಂಶೋಧಕ ಸತ್ತೇ ಹೋಗುತ್ತಾನೆ. ಇವೆರಡನ್ನು ಸಂಯೋಜಿಸಿಕೊಳ್ಳುವ ಅದ್ಭುತ ಬುದ್ಧಿ ಮತ್ತೆಯನ್ನು ಯಾರು ತೋರುತ್ತಾರೆಯೋ ಅವರು ಶ್ರೇಷ್ಠ ಕ್ಷೇತ್ರ ಕಾರ್ಯಕರ್ತರಾಗುತ್ತಾರೆ. "ನೀರೊಳಗಿರ್ದುಂ ಪೊರ್ದದು ನೀರಂ ನೀರೇಜ' ಎಂಬಂತೆ ಆತ ಕೆಲಸ ಮಾಡಬೇಕಾಗುತ್ತದೆ. ಈ ಮಾತು ಸಂದರ್ಶನಕ್ಕೆ ಅನ್ವಯವಾಗುತ್ತದೆ. ನೇರವಾಗಿ ಮತ್ತು ಪರೋಕ್ಷವಾಗಿ ಆತ ಕೇಳುವ ಪ್ರಶ್ನೆಗಳು, 'ಜಾನಪದದ ಒಳಗಿನವನಾಗಿ' ಕೇಳುವಂತಿರಬೇಕು. ಆದರೆ ಅದನ್ನು ಕೇಳಿಸಿಕೊಳ್ಳುವ ಕ್ಷಣದಲ್ಲಿ ಆತ ಒಳಗಿನವನಾಗದೆ ಹೊರಗಿನವನಾಗಿರಬೇಕು. ಹಾಗೆ ಆಗದೆ ಇದ್ದರೆ ಅವನಿಗೆ ವಿವರಗಳನ್ನು ದಾಖಲಿಸಿಕೊಳ್ಳಲಾಗುವುದೂ ಇಲ್ಲ, ನಿರೂಪಕರ ಬಾಯಿ ಬಿಡಿಸಲಾಗುವುದೂ ಇಲ್ಲ.

'ವೀಕ್ಷಣೆ ಮತ್ತು ಸಂದರ್ಶನ'ಗಳೇ ಕ್ಷೇತ್ರದಲ್ಲಿ ಗರಿಷ್ಟ ಮಟ್ಟದ ಮಾಹಿತಿಗಳನ್ನು ನೀಡುತ್ತವೆ. ಹಾಗಾಗಿ ಅವೆರಡರ ಬಳಕೆಯ ಬಗೆಗೆ ಸಂಶೋಧಕನಿಗೆ ಪೂರ್ಣ ಪ್ರಮಾಣದ ಎಚ್ಚರ ಅಗತ್ಯ. ಔಚಿತ್ಯವರಿತು ಅವುಗಳನ್ನು ಬಳಸಿಕೊಳ್ಳದೇ ಹೋದರೆ, ಮಾಹಿತಿ ಸಂಗ್ರಹ ಪೂರ್ತಿಯಾಗಿ ವಿಫಲವಾಗುತ್ತದೆ.

ಹೀಗೆ ಜಾನಪದ ಕ್ಷೇತ್ರ ಕಾರ್ಯಕರ್ತನು ಜಾನಪದದ ಬಗೆಗಿನ ತನ್ನ ನಿರ್ವಚನೆ, ತನ್ನ ಸೈದ್ಧಾಂತಿಕ ನಿಲುವು, ಮತ್ತು ಕ್ಷೇತ್ರ ಕಾರ್ಯವಿಧಾನದ ಕುರಿತು ಎಷ್ಟೆಷ್ಟು ಖಚಿತವಾದ ಅಭಿಪ್ರಾಯಗಳನ್ನು ಹೊಂದಿರುತ್ತಾನೋ ಅಷ್ಟರ ಮಟ್ಟಿಗೆ ಅವನ ಸಂಗ್ರಹ ಕಾರ್ಯ ವೈಜ್ಞಾನಿಕವಾಗುತ್ತಾ ಹೋಗುತ್ತದೆ.

3. ಕ್ಷೇತ್ರ ಕಾರ್ಯ ಪೂರ್ವ ತಯಾರಿಗಳು

ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡ ಅನಂತರ ಸಂಶೋಧಕನು ಅಪಾರವಾದ ಕೆಲಸಗಳಲ್ಲಿ ಮಗ್ನನಾಗಿರಬೇಕಾಗುತ್ತದೆ. ಅವನಿಗೆ ಅಲ್ಲಿ ಬಗೆಬಗೆಯ ಸಾಮಗ್ರಿಗಳು ಬೇಕಾಗುತ್ತವೆ. ಆ ಹೊತ್ತಿನಲ್ಲಿ ಯಾವುದಾದರೂ ಒಂದು ವಸ್ತು ದೊರೆಯದೇ ಹೋದರೂ ಆತ ಪರಿತಪಿಸಬೇಕಾಗುತ್ತದೆ. ಹೀಗಾಗದಂತೆ ಮಾಡಲು ಆತ ಕ್ಷೇತ್ರ ಕಾರ್ಯಕ್ಕೆ ಮುನ್ನ ಸಾಕಷ್ಟು ತಯಾರಿ ನಡೆಸಬೇಕಾಗುತ್ತದೆ. ಆಕಸ್ಮಿಕ ಕ್ಷೇತ್ರ ಕಾರ್ಯ ಯಾವಾಗಲೂ ಒಳ್ಳೆಯದಲ್ಲ, ಅದು ಅನೇಕ ಸಂಗತಿಗಳನ್ನು ಸಂಗ್ರಹಿಸಲಾಗದಂತೆ ತಡೆಯೊಡ್ಡುತ್ತದೆ. ಯೋಜಿತ ಕ್ಷೇತ್ರ ಕಾರ್ಯ ಯಾವಾಗಲೂ ಒಳ್ಳೆಯದು. 'ಸಂಕ ಮುರಿದಲ್ಲೇ ಸ್ನಾನ' ಎಂಬ ಗಾದೆ ಕ್ಷೇತ್ರ ಕಾರ್ಯಕ್ಕಂತೂ ಅನ್ವಯವಾಗಬಾರದು. ಈ

ಹಿನ್ನೆಲೆಯಲ್ಲಿ ಕ್ಷೇತ್ರ ಕಾರ್ಯ ನಡೆಸುವ ಸಾಕಷ್ಟು ಮುನ್ನವೇ ಸಂಶೋಧಕನು ಈ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕಾಗುತ್ತದೆ.

3.1 ಸಮಸ್ಯೆಯ ಬಗೆಗೆ ಆಳವಾದ ಅರಿವು

ಸಂಶೋಧಕನಿಗೆ ತಾವು ಪರಿಹರಿಸಬೇಕಾದ ಸಮಸ್ಯೆಯ ಬಗೆಗೆ ಪೂರ್ಣ ಮಟ್ಟದ ಅರಿವು ಇರಬೇಕಾಗುತ್ತದೆ. ಈ ಅರಿವಿನಲ್ಲಿಯೇ ಸಮಸ್ಯಾ ಪರಿಹಾರಕ್ಕಾಗಿ ಆತ ಕ್ಷೇತ್ರದಿಂದ ಮಾಹಿತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಈ ಮಾತುಗಳನ್ನು ಹೇಳುವುದು ಸುಲಭ. ಆದರೆ ಪ್ರಾಯೋಗಿಕವಾಗಿ ಸಂಶೋಧಕನು ಇದಕ್ಕಾಗಿ ಸಾಕಷ್ಟು ಕೆಲಸ ಮಾಡಬೇಕಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ. ಆತನಿಗೆ ತಾನು ಕೆಲಸ ಮಾಡುವ ಶಿಸ್ತಿನ ಬಗೆಗೆ ತಕ್ಕ ಮಟ್ಟಿನ ಜ್ಞಾನ ಬೇಕಾಗುತ್ತದೆ. ಆ ಶಿಸ್ತುವಿನಲ್ಲಿ ನಡೆದ, ನಡೆಯುತ್ತಿರುವ ಸಂಶೋಧನೆಗಳ ಬಗೆಗೂ ಪ್ರಾಥಮಿಕ ಜ್ಞಾನ ಅಗತ್ಯ. ಈ ಬಗೆಯ ಚಾರಿತ್ರಿಕ ಪ್ರಜ್ಞೆ ಇಲ್ಲದೆ ಇದ್ದರೆ ಸಂಶೋಧಕನಿಗೆ ಕೆಲಸವನ್ನು ಎಲ್ಲಿಂದ ಆರಂಭಿಸಬೇಕೆಂಬ ಬಗ್ಗೆಯೇ ಒಂದು ಕಲ್ಪನೆ ಮೂಡುವುದು ಅವಶ್ಯ. ನಾರ್ಥೋಪ್ ಹೇಳುವಂತೆ 'ಯಾವುದೇ ಹುಡುಕಾಟದ ಅತ್ಯಂತ ಕಠಿಣ ಭಾಗವೆಂದರೆ, ಅದರ ಆರಂಭವೇ' ಆಗಿರುತ್ತದೆ. (1959:1) ಹೀಗಿರುವುದರಿಂದ ಕ್ಷೇತ್ರ ಕಾರ್ಯಕರ್ತನು ಕ್ಷೇತ್ರಕ್ಕೆ ಹೋಗುವ ಮುನ್ನ ಪರಿಣತರಿಂದ ಸ್ವಲ್ಪ ಮಟ್ಟಿಗೆ ತರಬೇತಿಯನ್ನು ಪಡೆಯುವುದೂ ಅಪೇಕ್ಷಣೆಯವೇ ಆಗಿರುತ್ತದೆ. ಯಾವ ತರಬೇತಿಯೂ ಇಲ್ಲದೆ, ಅಧ್ಯಯನವೂ ಇಲ್ಲದೆ, ತಾನು ಪರಿಹರಿಸಿಕೊಳ್ಳಬೇಕಾದ ಸಮಸ್ಯೆಯ ಬಗ್ಗೆ ಅರಿವೂ ಇಲ್ಲದೆ ಸುಮ್ಮನೆ ಸಂಗ್ರಹ ಮಾಡೋಣ. ಮುಂದೆ ಎಂದಾದರೂ ಪ್ರಯೋಜನಕ್ಕೆ ಬಂದೀತು ಎಂದುಕೊಂಡು ಮಾಡುವ ಕೆಲಸಗಳು, ಪೂರ್ಣವಾಗಿ ನಿರುಪಯುಕ್ತವಾಗದಿದ್ದರೂ, ಬಹೂಪಯೋಗಿಯಂತೂ ಖಂಡಿತ ಆಗಲು ಸಾಧ್ಯವಿಲ್ಲ. ಈ ಲೇಖನದ ಆರಂಭದಲ್ಲಿ ಚರ್ಚಿಸಲಾದಂತೆ, ಪ್ರತಿಯೊಂದು ಸಿದ್ಧಾಂತಗಳೂ ತಮ್ಮ ಕಾರ್ಯಕ್ಕೆ ಅನುಗುಣವಾದ ಮಾಹಿತಿ ಶರೀರವನ್ನು ಕ್ಷೇತ್ರದಿಂದ ಸಂಗ್ರಹಿಸಲು ಸಂಶೋಧಕನನ್ನು ಒತ್ತಾಯಿಸುತ್ತದೆ.

3.2 ಸಮಸ್ಯೆಯ ವಿಶ್ಲೇಷಣೆ ಮತ್ತು ಪ್ರಶ್ನಾವಳಿಯ ತಯಾರಿ

ಸಂಶೋಧಕನು ತಾನು ಪರಿಹರಿಸಲೇಬೇಕಾದ ಸಮಸ್ಯೆಯ ಪೂರ್ಣ ಅರಿವಿನಲ್ಲಿಯೇ ಕ್ಷೇತ್ರಕ್ಕೆ ಹೋಗುವಂತಿಲ್ಲ. ಅದಕ್ಕೆ ಮುನ್ನ ತನ್ನ ಸಮಸ್ಯೆಯನ್ನು ವಿಶ್ಲೇಷಿಸಿಕೊಳ್ಳಬೇಕಾಗುತ್ತದೆ. ನಾತ್ರೋಪನ ಪ್ರಕಾರ ಸಮಸ್ಯೆಯ ಅರಿವು ಮತ್ತು ವಿಶ್ಲೇಷಣೆ ಒಟ್ಟಿಗೆ ನಡೆಯುವ ಕೆಲಸ. ಅದೇನೇ ಇರಲಿ ಸಮಸ್ಯೆಯ ವಿಶ್ಲೇಷಣೆ ಯಾಕೆ ಅಗತ್ಯವಾಗುತ್ತದೆ ಎಂದರೆ, ಕ್ಷೇತ್ರ ಕಾರ್ಯದ ವಿಧಾನಗಳನ್ನು ಆದರಲ್ಲೂ ಮುಖ್ಯವಾಗಿ ಪ್ರಶ್ನಾವಳಿಯನ್ನು ರೂಪಿಸಿಕೊಳ್ಳಲು ಮತ್ತು ಎಂಥ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಬೇಕೆಂಬ ಬಗೆಗೆ ಸ್ಥೂಲವಾದ ಒಂದು ನಿರ್ಣಯ ಮಾಡಿಕೊಳ್ಳಲು[1] ಹೀಗೆ ಮಾಡುವುದರಿಂದ ಕ್ಷೇತ್ರದಲ್ಲಿ ಅನಗತ್ಯವಾಗಿ ಕಾಲಹರಣ ಮಾಡುವುದು

ತಪ್ಪುತ್ತದೆ. ಈ ನಿಟ್ಟಿನಲ್ಲಿ ಸಮಸ್ಯೆಯನ್ನು ವಿಶ್ಲೇಷಿಸಿಕೊಳ್ಳುವುದರಿಂದ ಈ ಕೆಳಗಿನ ಐದು ಅಂಶಗಳು ಸ್ಪಷ್ಟವಾಗುತ್ತವೆ.

3.2.1 ಕ್ಷೇತ್ರ ಕಾರ್ಯವನ್ನು ಎಲ್ಲಿ ಮಾಡಬೇಕು?

3.2.2: ಎಷ್ಟು ಕಾಲ ಕ್ಷೇತ್ರ ಕಾರ್ಯ ನಡೆಸಬೇಕು?

3.2.3 ಎಂಥ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಬೇಕು?

3.2.4 ಯಾವ ವಿಧಾನದಲ್ಲಿ ಮಾಹಿತಿಗಳನ್ನು ಸಂಗ್ರಹಿಸಬೇಕು?

3.2.5 ಎಂಥ ವ್ಯಕ್ತಿಗಳಿಂದ ವಿಷಯ ಸಂಗ್ರಹಿಸಬೇಕು?

ಇದಕ್ಕೆ ಅನುಗುಣವಾಗಿ ಸಂಶೋಧಕನು ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಕ್ಷೇತ್ರದಲ್ಲಿ ದೊರೆಯಬಹುದಾದ ಮಾಹಿತಿಗಳ ಬಗೆಗೆ ತುಂಬಾ ಸ್ಪಷ್ಟವಾದ ಪೂರ್ವ ಕಲ್ಪನೆ ಇರುವವರು ನಿರ್ಬಂಧಿತ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಳ್ಳಬಹುದು. ಉದಾಹರಣೆಗೆ ನಿಮಗೆ ತಿಳಿದಿರುವ ಭಾಷೆಗಳು ಯಾವುವು?

(ಅ) ತುಳು (ಆ) ಕನ್ನಡ (ಇ) ಮಲೆಯಾಳ (ಈ) ಇತರ

ಇಲ್ಲಿ ಉತ್ತರಕ್ಕೆ ಒಂದು ಗುರುತು ಹಾಕಿಕೊಂಡರೆ ಸಾಕಾಗುತ್ತದೆ. ಆದರೆ ಕ್ಷೇತ್ರದಲ್ಲಿ ದೊರೆಯುವ ಮಾಹಿತಿಗಳ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದಿದ್ದಾಗಲೂ ಮುಕ್ತ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ : 'ಭೂತಾರಾಧನೆ' ಒಂದು ಬರಿಯ ನಾಟಕ ಎನ್ನುತ್ತಾರೆ. ನಿಮ್ಮ ಪ್ರತಿಕ್ರಿಯೆ ಏನು?

ಇಲ್ಲಿ ಉತ್ತರ ಬರೆಯಲು ಬೇಕಾದಷ್ಟು ಅವಕಾಶ ಇರುತ್ತದೆ. ನಿರೂಪಕನಿಗೆ ಬೇಕಾದಷ್ಟು ಸ್ವಾತಂತ್ರ್ಯವೂ ಇರುತ್ತದೆ. ಇಲ್ಲಿ ನಾವು ಗಮನಿಸಬೇಕಾದದ್ದು ಯಾವುದು ಒಳ್ಳೆಯ ಪ್ರಶ್ನಾವಳಿ ಎಂಬುದಕ್ಕಿಂತ ಮಿಗಿಲಾಗಿ ನಮಗೆ ಎಂಥ ಪ್ರಶ್ನಾವಳಿ ಬೇಕೆಂಬುದನ್ನು ಸಂಶೋಧಕ ಅಗತ್ಯವಾಗಿ ತೀರ್ಮಾನಿಸಿಕೊಳ್ಳಬೇಕಾಗುತ್ತದೆ ಎಂಬ ವಿಚಾರ. ಡಾ|| ಕೆ.ಚಿನ್ನಪ್ಪ ಗೌಡ (1990: 275-296) ಅಜಿತಕುಮಾರ (1992) ಮೊದಲಾದವರು ತಮ್ಮ ಸಂಶೋಧನೆಯ ಸಂದರ್ಭದಲ್ಲಿ ಉಪಯೋಗಿಸಿದ ಪ್ರಶ್ನಾವಳಿಗಳ ಮಾದರಿಗಳನ್ನು ತಮ್ಮ ವರದಿಯಲ್ಲಿ ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು[2] ಪ್ರಶ್ನಾವಳಿಗಳು ಹೆಚ್ಚು ದೀರ್ಘವಾದರೆ ಅದು ದೋಷವಾಗಿಬಿಡುವ ಸಾಧ್ಯತೆ ಇದೆ. ಹಾಗೆಂದು ಸಂಕ್ಷಿಪ್ತತೆಯೇ ಪ್ರಶ್ನಾವಳಿಯ ಲಕ್ಷಣವೇನೂ ಅಲ್ಲ. ಸಂಶೋಧಕನು ತನ್ನ ವಿಷಯ ಮಂಡನೆಗೆ ಅಗತ್ಯವಿರುವ ಮಾಹಿತಿಯ ಸಂಗ್ರಹಕ್ಕಾಗಿ ಪ್ರಶ್ನಾವಳಿಯ ಉಪಯೋಗವನ್ನು ಮಾಡಿಕೊಳ್ಳಬೇಕು ಎಂಬುದು ಸದ್ಯಕ್ಕೆ ಮುಖ್ಯವಾದ ವಿಚಾರವಾಗಿದೆ.

3.3 ಕ್ಷೇತ್ರದ ಬಗೆಗೆ ಮಾಹಿತಿ ಸಂಗ್ರಹ

ಕ್ಷೇತ್ರಕ್ಕೆ ಹೋಗುವ ಮುನ್ನವೇ ಸಂಶೋಧಕನು ಆ ಕ್ಷೇತ್ರದ ಬಗ್ಗೆ ಮತ್ತು ಅಲ್ಲಿಯ ಜನರ ಬಗ್ಗೆ ಕನಿಷ್ಠ ಮಟ್ಟದ ಜ್ಞಾನವನ್ನಾದರೂ ಹೊಂದಿರುವುದು ಅವಶ್ಯಕ. ಇವುಗಳ ಬಗೆಗೆ ಪ್ರಕಟಿತ ಮಾಹಿತಿಗಳಿದ್ದರೆ ಅನುಕೂಲವೇ ಆಯಿತು. ಇಲ್ಲದಿದ್ದರೂ ಕೆಲವು ವ್ಯಕ್ತಿಗಳ ಮೂಲಕವಾದರೂ ಅವುಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಆ ಕ್ಷೇತ್ರದ ಸಾಮಾಜಿಕ, ಇತಿಹಾಸ, ಜನರ ಮುಖ್ಯ ವೃತ್ತಿ, ವಿದ್ಯಾಭ್ಯಾಸದ ಮಟ್ಟ, ಆ ಪ್ರದೇಶದ ಧಾರ್ಮಿಕ ಸ್ಥಿತಿಗತಿ, ಆರ್ಥಿಕತೆ, ರಾಜಕೀಯ ಮತ್ತು ಸಾಂಸ್ಕೃತಿಕ ವಿವರಗಳನ್ನು ಸ್ವಲ್ಪ ಮಟ್ಟಿಗೆ ಅರಿತುಕೊಂಡರೆ ಕ್ಷೇತ್ರದಲ್ಲಿ ಜನರೊಂದಿಗೆ ಸಂವಹನ ಸುಲಭವಾಗುತ್ತದೆ. ಆಯಾ ಪ್ರದೇಶದ ಭೌಗೋಳಿಕ ಸ್ಥಿತಿಗತಿ, ಹವಾಮಾನ ಪರಿಸ್ಥಿತಿ, ಆಹಾರದ ಒದಗಣೆ, ಮಾರುಕಟ್ಟೆ ವ್ಯವಸ್ಥೆ, ಮತ್ತು ಸಂಪರ್ಕ ಸಾಧನೆಗಳ ಬಗ್ಗೆ ತಿಳಿದುಕೊಂಡಿದ್ದರೆ ಕ್ಷೇತ್ರ ಕಾರ್ಯದಲ್ಲಿ ವಿನಾಕಾರಣ ತೊಂದರೆಗೀಡಾಗುವುದು ತಪ್ಪುತ್ತದೆ.

3.4 ಅದೇ ಕ್ಷೇತ್ರದಲ್ಲಿ ದುಡಿದ ಇತರ ವಿದ್ವಾಂಸರೊಡನೆ ಸಂಪರ್ಕ

ತಾನು ಕ್ಷೇತ್ರ ಕಾರ್ಯಕ್ಕಾಗಿ ಹೋಗುತ್ತಿರುವ ಪ್ರದೇಶದಲ್ಲಿ ಈಗಾಗಲೇ ಬೇರಾರೋ ಒಬ್ಬ ವಿದ್ವಾಂಸನು ಕೆಲಸ ಮಾಡಿದ್ದರೆ ಅವನೊಡನೆ ಹಾರ್ದಿಕವಾದ ಸಂಬಂಧವನ್ನು ಬೆಳೆಸಿಕೊಳ್ಳುವುದು ಒಳ್ಳೆಯದು. ಇದರಿಂದ ಕ್ಷೇತ್ರದಲ್ಲಿ ಇದಿರಿಸಬೇಕಾದ ಸಮಸ್ಯೆಗಳನ್ನು ಹೆಚ್ಚು ಖಚಿತವಾಗಿ ತರ್ಕಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಅನೇಕ ಮಾಹಿತಿಗಳು ಸುಲಭ ಲಭ್ಯವಾಗುತ್ತದೆ. ತಾನು ಕೆಲಸ ಮಾಡಬೇಕಾದ ವಿಧಾನದ ಬಗೆಗೆಯೂ ಅವನಿಗೆ ಹೊಸದಾಗಿ ಯೋಚಿಸಲು ಸಾಧ್ಯ ಆಗುತ್ತದೆ. ಕ್ಷೇತ್ರದಲ್ಲಿ ಸಂಪರ್ಕಿಸಬಹುದಾದವರ, ಸಂಪರ್ಕಿಸಬಾರದವರ ಬಗೆಗೂ ಈ ಮೂಲಕ ಮಾಹಿತಿ ಲಭಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ನಾವು ಪಾಶ್ಚಾತ್ಯ ಜಾನಪದ ತಜ್ಞರಿಂದ ಪ್ರೇರಣೆ ಪಡೆಯಬೇಕು. ಅವರು ತಮ್ಮಲ್ಲಿರುವ ಮಾಹಿತಿಗಳನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾರೆ. ಅಗತ್ಯ ಬಿದ್ದರೆ ಪರಸ್ಪರ ನೆರವಾಗುತ್ತಾರೆ. ಕ್ಷೇತ್ರ ಕಾರ್ಯದ ಸುಖ ದುಃಖಗಳಲ್ಲಿ ಸಮಭಾಗಿಗಳಾಗುತ್ತಾರೆ. 'ಒಬ್ಬರಿಗಿಂತ ಇಬ್ಬರು ಹೆಚ್ಚು ನಿಜವಾಗಿರುತ್ತಾರೆ' ಎಂದು ಅವರು ನಂಬುತ್ತಾರೆ. ನಮ್ಮಲ್ಲಿ ಹಲವರು ಕ್ಷೇತ್ರ ಕಾರ್ಯವನ್ನು ಬಹಳ ಗುಟ್ಟಾಗಿ ಮಾಡುತ್ತಾರೆ. ತಾವು ಸಂಗ್ರಹಿಸಿದ ಮಾಹಿತಿಗಳು ಯಾರಿಗೂ ತಿಳಿಯದಂತೆ ಎಚ್ಚರವಹಿಸುತ್ತಾರೆ. ಇಂಥ ದೌರ್ಬಲ್ಯಗಳನ್ನು ಮೀರಿನಿಂತು ನಾವು ಇತರ ವಿದ್ವಾಂಸರೊಡನೆ ಮುಕ್ತವಾಗಿ ಸಂವಾದಿಸುವ ಸಂಸ್ಕೃತಿಯೊಂದನ್ನು ಬೆಳೆಸಿಕೊಳ್ಳಬೇಕಾಗಿದೆ. ಒಳ್ಳೆಯ ಕಾರ್ಯಕರ್ತನಿಗೆ ಅಗತ್ಯವಾದ ಕೆಲಸವದು.

3.5 ಸಲಕರಣೆಗಳ ಸಿದ್ಧತೆ

ಕ್ಷೇತ್ರ ಕಾರ್ಯಕ್ಕೆ ಅಗತ್ಯವಾದ ಸಲಕರಣೆಗಳು ಯಾವುವು ಎಂಬುದನ್ನು ತಾಳ್ಮೆಯಿಂದ ಯೋಚಿಸಿ ಪಟ್ಟಿ ಮಾಡಿಕೊಂಡಿರಬೇಕಾಗುತ್ತದೆ. ಪ್ರತಿಸಲವೂ ಕ್ಷೇತ್ರಕ್ಕೆ

ಹೋಗುವಾಗ ಆ ಪಟ್ಟಿಯನ್ನು ಪರೀಕ್ಷಿಸಿ, ಸಲಕರಣೆಗಳೆಲ್ಲವೂ ಇವೆಯೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಈ ಅರ್ಥದಲ್ಲಿ ಪ್ರತಿಯೊಬ್ಬ ಕ್ಷೇತ್ರ ಕಾರ್ಯಕರ್ತನಲ್ಲಿ ಒಂದು 'ಕ್ಷೇತ್ರ ಕಾರ್ಯ ಚೀಲ' ಇರುವುದು ಒಳ್ಳೆಯದು. 'ಕಂಬುಲ'ವನ್ನು ಅಧ್ಯಯನ ಮಾಡಲು ನಾನು ಕ್ಷೇತ್ರಕ್ಕೆ ಹೋಗುವಾಗ ನನ್ನಲ್ಲಿ ಆ ಕೆಳಗಿನ ವಸ್ತುಗಳಿದ್ದವು.

1. 200 ಪುಟದ ಒಂದು ಖಾಲಿ ನೋಟ್ಸ್ ಪುಸ್ತಕ.
2. 100 ಪುಟದ ಒಂದು ಪುಟ್ಟ ಟಿಪ್ಪಣಿ - ಕಿಸೆಯಲ್ಲಿ ಹಿಡಿಯುವಂಥದ್ದು.
3. ಎರಡು ಪೆನ್ನುಗಳು ಮತ್ತು ಒಂದು ಪೆನ್ಸಿಲು.
4. ಆ ವರ್ಷದ ದಿನಚರಿ ಪುಸ್ತಕ.
5. ಸಣ್ಣ ನೂಲಿನ ಉಂಡೆ.
6. ಪುಟ್ಟ ಚಾಕು.
7. ಪುಟ್ಟ ಟೇಪರೆಕಾರ್ಡರು ಮತ್ತು ಸಾಕಷ್ಟು ಕ್ಯಾಸೆಟ್ಟುಗಳು.
8. ಕ್ಯಾಮರಾ ಮತ್ತು ರೀಲು
9. ಅಗತ್ಯಕ್ಕಿಂತ ಸ್ವಲ್ಪ ಹೆಚ್ಚು ಬ್ಯಾಟರಿಗಳು.
10. ಅಗತ್ಯವಿರುವಷ್ಟು ಬಟ್ಟೆ ಮತ್ತಿತರ ನಿತ್ಯೋಪಯೋಗಿ ವಸ್ತುಗಳು.

ವೀಡಿಯೋ ಮತ್ತಿತರ ಆಧುನಿಕ ತಾಂತ್ರಿಕ ಸಾಮಗ್ರಿಗಳನ್ನು ಕೊಂಡೊಯ್ಯುವಾಗ ಅವುಗಳ ಬಿಡಿಭಾಗಗಳು ಜೊತೆಗಿರುವುದರೊಂದಿಗೆ ಅವುಗಳ ರಿಪೇರಿಯ ಬಗೆಗೂ ತಿಳಿದಿರುವುದು ಒಳ್ಳೆಯದು.[3] ಏನಿದ್ದರೂ ಇಲ್ಲಿ ಎಲ್ಲ ಸಲಕರಣೆಗಳನ್ನು ಪಟ್ಟಿ ಮಾಡಿಕೊಡಲು ಸಾಧ್ಯವಿಲ್ಲ, ಅವರವರ ಸಂಶೋಧನೆಗೆ ಅಗತ್ಯವಾದ ಸಲಕರಣೆಗಳನ್ನು ಜಾಗ್ರತೆಯಿಂದ ಸಿದ್ಧಮಾಡಿಟ್ಟುಕೊಳ್ಳಬೇಕೆಂಬುದು ಮುಖ್ಯ ಸಂಗತಿ.

3.6 ಪ್ರಾಯೋಗಿಕ ಸಂಗ್ರಹ

ತಾನು ಕೆಲಸ ಮಾಡಬೇಕಾಗಿರುವ ಕ್ಷೇತ್ರದಲ್ಲಿ ತನ್ನೆಲ್ಲ ಸಲಕರಣೆಗಳ ಸಹಿತ ಪ್ರಾಯೋಗಿಕವಾಗಿ ಕ್ಷೇತ್ರಕಾರ್ಯವೊಂದನ್ನು ನಡೆಸಿ, ಸಂಶೋಧಕನು ತನ್ನನ್ನೇ ತಾನೇ ಪ್ರಾಮಾಣಿಕವಾಗಿ ಪರೀಕ್ಷಿಸಿಕೊಳ್ಳುವುದು ಅಗತ್ಯ, ಜನಪದ ಕತೆಗಳ ಸಂಗ್ರಹದಲ್ಲಾದರೆ, ಒಂದು ದಿವಸ, ಒಬ್ಬರಿಂದ ಕತೆಯನ್ನು ಸಂಗ್ರಹಿಸಿ, ಸಂಗ್ರಹದ ಗುಣಮಟ್ಟ ಇತ್ಯಾದಿಗಳನ್ನು ಪರೀಕ್ಷಿಸಿಕೊಂಡರೆ, ಮುಂದೆ ಅತ್ಯುತ್ತಮವಾಗಿ ಕ್ಷೇತ್ರಕಾರ್ಯ ನಡೆಸಲು ಸಾಧ್ಯ. ಹಾಗೆಯೇ ಪ್ರಶ್ನಾವಳಿಗಳನ್ನು ಪರೀಕ್ಷಿಸಿಕೊಳ್ಳಬಹುದು. ಈ ಬಗೆಯಲ್ಲಿ ಮೊದಲೇ ಒಂದು ಪ್ರಯೋಗ ಮಾಡಿಕೊಂಡರೆ, ಕ್ಷೇತ್ರದಲ್ಲಾಗಬಹುದಾದ ಅನಾಹುತಗಳನ್ನು ಯಶಸ್ವಿಯಾಗಿ ತಡೆಯಬಹುದು.

3.7 ಇತರ ವಿಚಾರಗಳು

ಕ್ಷೇತ್ರಕಾರ್ಯಕರ್ತನು ತನ್ನ ಮಾಹಿತಿಗಾಗಿ ಹುಡುಕಾಟ ನಡೆಸುವುದು ಜನರ ಮಧ್ಯೆಯೇ. ಆದುದರಿಂದ ಆತ ಬಹಳ ಜಾಗರೂಕನಾಗಿರಬೇಕಾಗುತ್ತದೆ. ಅವನ ಪ್ರತಿ ಚರ್ಯೆಯನ್ನು ಜನರು ಗಮನಿಸುತ್ತಿರುತ್ತಾರೆ. ಹಾಗಾಗಿ ಜನರಿಗೆ ಪ್ರಿಯವಾಗುವಂತೆ ಆತ ನಡೆದುಕೊಳ್ಳಲೇಬೇಕಾಗುತ್ತದೆ. ಆತನ ವೈಯಕ್ತಿಕ ಇಷ್ಟಾನಿಷ್ಟಗಳಿಗೆ ಅಲ್ಲಿ ಅಂತ ಬೆಲೆಯೇನೂ ಇಲ್ಲ. ಮೇಲಾಗಿ ಜನರ ಪರಿಭಾಷೆಯಲ್ಲಿಯೇ ಮಾತನಾಡಲು ಆತ ಕಲಿತಿರಬೇಕಾಗುತ್ತದೆ. ಇದಕ್ಕಾಗಿ ಸಂಶೋಧಕನು ವಸ್ತು ಸಂಗ್ರಾಹಾಲಯಗಳ ಇಲ್ಲವೇ ದಾಖಲಾತಿ ಕೇಂದ್ರಗಳನ್ನು ಸಂದರ್ಶಿಸಿ, ತನ್ನ ಚರ್ಯೆಗಳನ್ನು, ನಡಾವಳಿಗಳನ್ನು, ಭಾಷೆಯನ್ನು ಪರಿಷ್ಕರಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ಕ್ಷೇತ್ರದಲ್ಲಿ ತನ್ನ ಮಾನಸಿಕ ಮಟ್ಟವನ್ನು ಜತನದಿಂದ ಕಾಯ್ದುಕೊಳ್ಳಬೇಕಾಗುತ್ತದೆ. ಅನಾರೋಗ್ಯದ ಸಂದರ್ಭದಲ್ಲಿ ಮಾನಸಿಕ ಒತ್ತಡಗಳಲ್ಲಿ ಬಳಲುತ್ತಿರುವ ಸಂದರ್ಭದಲ್ಲೆಲ್ಲ ಕ್ಷೇತ್ರ ಕಾರ್ಯಮಾಡದೆ ವಿಶ್ರಾಂತಿ ತೆಗೆದುಕೊಳ್ಳುವುದೇ ಒಳ್ಳೆಯದು. ಕ್ಷೇತ್ರದಲ್ಲಿ ಚಿತ್ತ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಮನೋದಾರ್ಢ್ಯವನ್ನು ಸಂಶೋಧಕ ಅಗತ್ಯವಾಗಿ ಬೆಳೆಸಿಕೊಳ್ಳಲೇಬೇಕಾಗುತ್ತದೆ.

ಮೇಲೆ ಹೇಳಿದ ಎಲ್ಲ ವಿವರಗಳೂ ಕ್ಷೇತ್ರಕಾರ್ಯಕರ್ತನಿಗೆ ಒಂದಲ್ಲ ಒಂದು ರೀತಿಯಿಂದ ಸಹಾಯ ಮಾಡುತ್ತವೆ. ಹಾಗಂತ ಅವು ನಾನು ಮೇಲೆ ಹೇಳಿದ ಕ್ರಮದಲ್ಲಿಯೇ ಬರಬೇಕೆಂದೇನೂ ಇಲ್ಲ. ಪರಿಸ್ಥಿತಿಯ ಅಗತ್ಯವನ್ನು ಗಮನಿಸಿಕೊಂಡು ಅವು ಕ್ರಿಯಾಶೀಲವಾಗುತ್ತಿರಬೇಕು.

4. ಕ್ಷೇತ್ರದಲ್ಲಿ ಸಂಶೋಧಕ

ಪೂರ್ವತಯಾರಿಗಳು ಏನೇ ಇದ್ದರೂ. ಸಂಶೋಧಕನು ಕ್ಷೇತ್ರದಲ್ಲಿ ಕೆಲಸ ಮಾಡುವ ರೀತಿಯೇ ನಿರ್ಣಾಯಕವಾದುದು. ಹಾಗಾಗಿ ಆತ ಇಲ್ಲಿ ಅತ್ಯಂತ ಜಾಗರೂಕತೆಯಿಂದ ಇರಬೇಕಾಗುತ್ತದೆ. ಈಗಾಗಲೇ ಸ್ಪಷ್ಟಪಡಿಸಲಾದಂತೆ, ಆತ ಕ್ಷೇತ್ರದಲ್ಲಿ ಪೂರ್ತಿ ತನ್ನನ್ನು ತೊಡಗಿಸಿಕೊಳ್ಳಬೇಕು ಮತ್ತು ಒಂದು ಬಗೆಯ ಅಂತರವನ್ನು ಕಾಪಾಡಿಕೊಳ್ಳಬೇಕು. ತನ್ನ ಅಪೂರ್ವವಾದ ನಡಾವಳಿ ಮತ್ತು ಚರ್ಯೆಗಳಿಂದ ಜನರ ಮನಸ್ಸನ್ನು ಗೆಲ್ಲುತ್ತಾ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಂಶೋಧಕನು ಕ್ಷೇತ್ರಕಾರ್ಯದಲ್ಲಿ ಮಾಡುಬಹುದಾದ ಕೆಲವು ಕೆಲಸಗಳನ್ನು ಕೆಳಗೆ ಸೂಚಿಸಲಾಗಿದೆ.

4.1 ಜನ ಸಂಪರ್ಕ ಸ್ಥಾಪನೆ

ಜನರ ಮಧ್ಯೆ ಕೆಲಸ ಮಾಡುವಾಗ ಜನ ಸಂಪರ್ಕವನ್ನು ಸಾಧಿಸಿಕೊಳ್ಳುವುದು ಅನಿವಾರ್ಯ. ಅಗತ್ಯವಿರುವಷ್ಟೇ ಜನರೊಂದಿಗೆ ಗಾಢ ಸಂಬಂಧವನ್ನು

ಹೊಂದಿರಬೇಕಾಗುತ್ತದೆ. ಈ ವಿಧದ ಸಂಬಂಧ ನಿರ್ಮಾಣಕ್ಕೆ ಸಿದ್ಧ ಮಾದರಿಗಳೇನೂ ಇಲ್ಲವಾದರೂ ಕೆಳಗಿನ ಅಂಶಗಳನ್ನು ಪರಿಶೀಲಿಸಿಕೊಳ್ಳಬಹುದು.

4.1.1 ಕ್ಷೇತ್ರಕಾರ್ಯಕ್ಕಾಗಿ ಜನರ ಮಧ್ಯೆ ಹೋಗುವಾಗ ಎಲ್ಲಿ ಉಳಕೊಳ್ಳುತ್ತೀರಿ ಎಂಬುದು ಗಮನಾರ್ಹವಾಗುತ್ತದೆ. ಸಾಮಾನ್ಯವಾಗಿ ಕ್ಷೇತ್ರಕಾರ್ಯದ ಕೇಂದ್ರ ಸ್ಥಾನದಲ್ಲಿದ್ದರೆ ಎಲ್ಲ ಕಡೆಯಿಂದಲೂ ಜನಸಂಪರ್ಕ ಸಾಧ್ಯವಾಗುತ್ತದೆ. ಜೊತೆಗೆ ಅಗತ್ಯಕ್ಕೆ ಅನುಗುಣವಾಗಿ ಅದನ್ನು ಬದಲಾಯಿಸುತ್ತಿರಬೇಕಾಗುತ್ತದೆ.

4.1.2 ಭಾರತೀಯ ಸಮಾಜವು ಜಾತಿಬದ್ಧವೂ, ಶ್ರೇಣೀಕರಣಕ್ಕೆ ಒಳಗಾಗಿರುವಂಥದ್ದೂ ಆಗಿರುವುದರಿಂದ ನೀವು ಯಾವ ಜಾತಿಯವರಲ್ಲಿ ಉಳಕೊಳ್ಳುತ್ತೀರಿ? ಎಂಬುದು ಕ್ಷೇತ್ರಕಾರ್ಯದ ದೃಷ್ಟಿಯಿಂದ ಮುಖ್ಯವಾಗುತ್ತದೆ. ಅದೇ ರೀತಿ ನಿಮ್ಮ ಜಾತಿಯೂ ಸಾಕಷ್ಟು ತಡೆಗಳನ್ನು ಒಡ್ಡಬಹುದು. ಆಹಾರ ಪದ್ಧತಿಯೂ ಮುಖ್ಯವಾಗುತ್ತದೆ. ನಮ್ಮ ಸಮಾಜ ಮಾಂಸಾಹಾರ ಮತ್ತು ಸಸ್ಯಹಾರದ ಮಧ್ಯೆ ಒಡೆದುಹೋಗಿರುವುದರಿಂದ ಸಂಶೋಧಕನು ಈ ನಿಟ್ಟಿನಲ್ಲಿಯೂ ಯೋಚಿಸಬೇಕು. ಮುಖ್ಯವಾಗಿ ಈ ಸಮಸ್ಯೆಯನ್ನು ಸಸ್ಯಾಹಾರಿಗಳು ಪರಿಹರಿಸಿಕೊಳ್ಳಬೇಕಾಗಿದೆ. ಭಾರತೀಯ ಸಂದರ್ಭದಲ್ಲಿ ಸಸ್ಯಾಹಾರಿಗಳಿಗಿಂತ ಮಾಂಸಾಹಾರಿಗಳೇ ಹೆಚ್ಚಿನ ಮಟ್ಟಿನ ಜನ ಸಂಪರ್ಕವನ್ನು ಸಾಧಿಸಲು ಸಾಧ್ಯ.

4.1.3 ಸಂಶೋಧಕನು ಜನರ ಪರಿಭಾಷೆಯಲ್ಲಿ ಮಾತನಾಡಲು ಕಲಿತಷ್ಟೂ ಅವನಿಗೆ ಹೆಚ್ಚು ವಿವರಗಳು ಸಿಗುತ್ತವೆ. ಈ ಮಾತು ಅಂತಿಮವಾಗಿ ಸಂಶೋಧಕನಿಗೆ ದೊರೆತ ಶಿಕ್ಷಣ ವ್ಯವಸ್ಥೆಯ ಕುರಿತು ನಮ್ಮ ಗಮನವನ್ನು ಸೆಳೆಯುತ್ತದೆ. ಏಕೆಂದರೆ ಇಂದಿನ ಶಿಕ್ಷಣ ಪದ್ಧತಿಯು ವಿದ್ಯಾವಂತನನ್ನು ಅವನು ಹುಟ್ಟಿಬಂದ ಪರಿಸರದಿಂದ ಬಹಳ ನಾಜೂಕಾಗಿ ಪ್ರತ್ಯೇಕಿಸಿಬಿಡುತ್ತದೆ. ಹೀಗೆ ಪ್ರತ್ಯೇಕಗೊಂಡ ವ್ಯಕ್ತಿಗೆ ಮತ್ತೆ ಜನರೊಂದಿಗೆ ಸಂವಹನ ಸಾಧ್ಯವಾಗುವುದಿಲ್ಲ, ಏಕೆಂದರೆ ಆತ ತನ್ನ ಚಿಂತನಾಕ್ರಮದಲ್ಲಿ ತಾನು ಜನರಿಗಿಂತ ಭಿನ್ನ ಮಾತ್ರವಲ್ಲ ಶ್ರೇಷ್ಠ ಎಂದೂ ಭ್ರಮಿಸಿಕೊಂಡಿರುತ್ತಾನೆ. ಜನರೂ ಸಾಮಾನ್ಯವಾಗಿ 'ಕಲಿತವನು ತಮ್ಮಿಂದ ಶ್ರೇಷ್ಠ'ಎಂದು ಭಾವಿಸುತ್ತಾರೆ. ಈ ಎರಡು ಗ್ರಹಿಕೆಗಳು ಸಂವಹನದ ದೃಷ್ಟಿಯಿಂದ ಭಾರೀ ಅಪಾಯಕಾರಿ ನೆಲೆಗಳು. ಸಂಶೋಧಕನು ತನ್ನ ಅಗತ್ಯಕ್ಕಾಗಿ ಈ ಮಿತಿಗಳನ್ನು ಮೀರುತ್ತಾ ಜನಸಂಪರ್ಕವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಸಂಶೋಧಕ ಮತ್ತು ನಿರೂಪಕರ ಮಧ್ಯೆ ಸಮಾನ ನೆಲೆಗಳು ಸ್ಥಾಪಿತವಾಗಿರಬೇಕಾಗುತ್ತದೆ.

4.2 ಸೂಕ್ಷ್ಮವೀಕ್ಷಣೆ ಮತ್ತು ದಾಖಲಾತಿ

ಈ ಲೇಖನದ ಆರಂಭದಲ್ಲಿ ಚರ್ಚಿಸಲಾದಂತೆ ಸಂಶೋಧಕನು ಕ್ಷೇತ್ರದಲ್ಲಿ ಏನನ್ನು ನೋಡಬೇಕು ಮತ್ತು ಏನೇನನ್ನು ದಾಖಲಿಸಿಕೊಳ್ಳಬೇಕು ಎಂಬುದು, ಅವನ ಸೈದ್ಧಾಂತಿಕ ಗ್ರಹಿಕೆ ಮತ್ತು ಅವನು ಸಮಸ್ಯೆಯನ್ನು ನಿರ್ವಚಿಸಿಕೊಂಡ ರೀತಿಯನ್ನು ಅವಲಂಬಿಸಿದೆ. ಕಂಡದ್ದೆಲ್ಲವನ್ನು ದಾಖಲಿಸಬೇಕೆಂಬ ಹುಚ್ಚು ಮೋಹ ಸಂಶೋಧಕನಿಗೆ ಬೇಕಾಗಿಲ್ಲ, ಬದಲು ಅಗತ್ಯವಿರುವುದನ್ನು ಚೂರೂ ಬಿಡದೆ, ಸೂಕ್ಷ್ಮವಾಗಿ ದಾಖಲಿಸಿಕೊಳ್ಳುವ ಪ್ರಜ್ಞೆ ಅವನಿಗೆ ಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಏಕಾಂಗಿಯಾಗಿ ಕ್ಷೇತ್ರಕಾರ್ಯ ಮಾಡುವುದಕ್ಕಿಂತ ಸಮಾನ ಮನಸ್ಕರಾದ ಇತರರೊಂದಿಗೆ ಸೇರಿಕೊಂಡು ಸಾಮೂಹಿಕವಾಗಿ ಕೆಲಸ ಮಾಡುವುದೇ ಹೆಚ್ಚು ಉಪಯುಕ್ತ. ಹೀಗೆ ಮಾಡುವುದರಿಂದ ಒಂದೇ ಘಟನೆಗೆ ಸಂಬಂಧಿಸಿದಂತೆ ಏಕಕಾಲದಲ್ಲಿ ವಿವಿದೆಡೆಗಳಲ್ಲಿ ನಡೆಯುತ್ತಿರುವ ಕಾರ್ಯಗಳೆಲ್ಲವನ್ನು ದಾಖಲು ಮಾಡಿದಂತಾಗುತ್ತದೆ. ಇದಕ್ಕಾಗಿ ನಾವು ಧರ್ಮಸ್ಥಳ ಪರಿಸರದಲ್ಲಿ ನಡೆದ ಫಿನಿಶ್-ಇಂಡಿಯಾ ಯೋಜನೆಯ ಕ್ಷೇತ್ರಕಾರ್ಯದಿಂದ ಪ್ರೇರಣೆ ಪಡೆಯಬಹುದಾಗಿದೆ. (ಈ ಯೋಜನೆಯ ಬಗೆಗೆ ಲೇಖನದ ಕೊನೇ ಭಾಗದಲ್ಲಿ ವಿವರ ನೀಡಲಾಗಿದೆ.)

ಸದ್ಯ ಕ್ಷೇತ್ರಕಾರ್ಯದಲಿ ಮುಂದಿನ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಕೆಲಸ ಮಾಡಬಹುದು.

4.2.1 ಏನನ್ನು ನೋಡಬೇಕು

ಎಲ್ಲವನ್ನು ನೋಡಬೇಕೆಂಬುದೇ ಇದಕ್ಕೆ ಸರಿಯಾದ ಉತ್ತರ. ಆದರೆ ಎಲ್ಲರೂ ಮನುಷ್ಯರೇ ಆಗಿರುವುದರಿಂದ ಆದರ್ಶಗಳೆಲ್ಲ ವಾಸ್ತವಗಳಾಗುವುದಿಲ್ಲ. ಈ ಮಿತಿಯಲ್ಲಿ ಕೆಳಗಿನ ಅಂಶಗಳನ್ನು ನೋಡಿ, ಟಿಪ್ಪಣಿ ಮಾಡಿಕೊಳ್ಳಬಹುದು.

ಅ) ಜಾನಪದ ಸಂದರ್ಭವೊಂದರ ಭೌತಿಕ ಸ್ಥಿತಿಗತಿ.

ಆ) ಜಾನಪದ ಸಂದರ್ಭವೊಂದರ ಸಾಮಾಜಿಕ ಸ್ಥಿತಿಗತಿ.

ಇ) ಪ್ರೇಕ್ಷಕ ಸಮುದಾಯದ ನಡಾವಳಿಗಳು, ಪ್ರತಿಕ್ರಿಯೆ.

ಈ) ಒಟ್ಟು ಪ್ರದರ್ಶನದ ಪೂರ್ತಿ ವಿವರಗಳು, ಪ್ರತಿಕ್ರಿಯೆ.

ಉ) ಪ್ರದರ್ಶನದ ಒಟ್ಟು ಕಾಲಾವಧಿ-ಹಂತಹಂತವಾಗಿ.

ಊ) ಪ್ರದರ್ಶನ ಸ್ಥಳ.

ಎ) ಪ್ರದರ್ಶಕರ ವಿವರ.

ಎ) ದಾಖಿಲಾತಿಕಾರನ ಭಾಗವಹಿಸುವಿಕೆಯ ಸ್ವರೂಪ, ಅವನ ಮಾನಸಿಕ ಸ್ಥಿತಿ, ಅವನಿಗೆ ಅನುಕೂಲಕರವಾದ ಅಥವಾ ಅನಾನುಕೂಲಕರವಾದ ಸಂದರ್ಭಗಳು ಇತ್ಯಾದಿ.

4.2.2 ಯಾವಾಗ? ಏನನ್ನು? ಹೇಗೆ ದಾಖಲಿಸಬೇಕು?

ಜನಪದ ಪ್ರದರ್ಶನವೊಂದು ಸಹಜವಾಗಿ ನಡೆಯುವಾಗವಾಗಲೀ, ಕೃತಕ ಸಂದರ್ಭದಲ್ಲಿ ನಡೆಯುತ್ತಿರುವಾಗಲೀ, ಸಂಶೋಧಕನ ಉಪಸ್ಥಿತಿ ಒಟ್ಟು ಪ್ರದರ್ಶನಕ್ಕೆ ಬಾಧಕ ಉಂಟುಮಾಡುವಂತಿರಬಾರದು. ಸಾಮಾನ್ಯವಾಗಿ ಜನಪದರು ಬಹಳ ಬೇಗ ತಮ್ಮ ಕ್ರಿಯೆಯಲ್ಲಿ ತಲ್ಲೀನರಾಗಿಬಿಡುವುದರಿಂದ, ಸಂಶೋಧಕನಿಗೆ ಇದೇನು ಕಷ್ಟದ ಕೆಲಸ ಆಗುವುದಿಲ್ಲ. ಆದರೂ ಸಂಶೋಧಕನು ಸ್ವಲ್ಪ ಮಂದಬುದ್ಧಿಯವನಾದರೆ ಅಥವಾ ಆತನ ಚುರುಕು ಸಾಲದಾದರೆ ಅವನ ದಾಖಲಾತಿಗೆ ಅವನೇ ತೊಂದರೆ ತಂದುಕೊಳ್ಳುವಂತಾಗುತ್ತದೆ. ಏನಿದ್ದರೂ ದಾಖಲಾತಿಗಾಗಿ ಪ್ರದರ್ಶನದೊಳಗೇ ಪುನರ್ ಪ್ರದರ್ಶನ ನೀಡುವಂತೆ ನಿರೂಪಕರ ಮೇಲೆ ಒತ್ತಡ ಹೇರುವುದರಿಂದ ಬಹಳ ತೊಂದರೆಯಾಗುತ್ತದೆ ಮಾತ್ರವಲ್ಲ ಒಟ್ಟು ಪ್ರದರ್ಶನದಲ್ಲಿ ಅವ್ಯವಸ್ಥೆ ಉಂಟಾಗುತ್ತದೆ[5]. ಹೀಗಾಗಿ ಪ್ರದರ್ಶನದ ಸಂದರ್ಭದಲ್ಲಿಯೇ ತನಗೆ ಅಗತ್ಯವಾಗಿರುವುದನ್ನು, ಉಪಲಬ್ಧ ಸಲಕರಣೆಗಳ ಮೂಲಕ ದಾಖಲಿಸಿಕೊಳ್ಳಬೇಕು. ಸ್ವಲ್ಪ ಉದಾಸೀನ ಮಾಡಿದರೂ ಸಾಕು. ಅದರಿಂದುಂಟಾಗಬಹುದಾದ ನಷ್ಟ ಅಪಾರ.

ಜನಪದ ಪ್ರದರ್ಶನದ ಸಂದರ್ಭದಲ್ಲಾಗಲೀ, ಪ್ರದರ್ಶನದ ಅನಂತರವಾಗಲೀ ವೀಕ್ಷಿಸಿದ್ದನ್ನು ದಾಖಲು ಮಾಡಿಕೊಳ್ಳುವಾಗ, ಅದು ನಮ್ಮ ವ್ಯಾಖ್ಯಾನ(Interpretation) ಗಳಿಗಿಂತ ಬೇರೆಯಾಗಿರುವಂತೆ ನೋಡಿಕೊಳ್ಳುವುದು ಅವಶ್ಯಕ. ವೀಕ್ಷಿಸಿದ್ದನ್ನು ದಾಖಲಿಸುವಾಗ ಸಾಧ್ಯವಾದಷ್ಟು ವಸ್ತುನಿಷ್ಠವಾಗಿರಬೇಕು. ಅಲ್ಲಿ ಕಂಡದ್ದನ್ನು ವ್ಯಾಖ್ಯಾನಿಸುತ್ತಾ ಹೋದರೆ, ವೀಕ್ಷಣೆಗೆ ತೊಡಕಾಗುತ್ತದೆ. ಹಾಗೆ ನೋಡಿದರೆ ನಾವು ಕಂಡದ್ದೆಲ್ಲವನ್ನೂ ದಾಖಲಿಸುವುದಿಲ್ಲ. ದಾಖಲಾತಿಯಲ್ಲೂ ಒಂದು ಬಗೆಯ ಆಯ್ಕೆ ನಡೆದಿರುತ್ತದೆ. ಈ ಆಯ್ಕೆಯೇ ಒಂದು ಬಗೆಯ ವ್ಯಾಖ್ಯಾನ ಹೌದಾದರೂ, ಕ್ಷೇತ್ರಕಾರ್ಯದಲ್ಲಿ ನಾವದನ್ನೆಲ್ಲ ಯೋಚಿಸುತ್ತ ಕುಳಿತುಕೊಳ್ಳಲಾಗುವುದಿಲ್ಲ. ಬಹಳ ಅನಿವಾರ್ಯವಾದರೆ ಪ್ರತ್ಯೇಕ ಕಾಗದದಲ್ಲಿ ನಾವದನ್ನು ಗುರುತು ಹಾಕಿಕೊಳ್ಳಬಹುದು. ಏನಿದ್ದರೂ ವೀಕ್ಷಣೆ ಮತ್ತು ವ್ಯಾಖ್ಯಾನಗಳಲ್ಲಿ ವ್ಯತ್ಯಾಸ ಇರುವಂತೆ ಟಿಪ್ಪಣಿ ಮಾಡಿಕೊಳ್ಳಬೇಕಾದ್ದು ಅಗತ್ಯ.

4.2.3 ತಾಂತ್ರಿಕ ಸಾಮಗ್ರಿಗಳ ಬಳಕೆ

ತಾಂತ್ರಿಕ ಸಾಮಗ್ರಿಗಳ ಬಳಕೆ ಪ್ರದರ್ಶನವೊಂದರ ಮೇಲೆ ಗಾಢ ಪರಿಣಾಮ ಬೀರುವುದರಿಂದ ಸಂಶೋಧಕನು ಅವುಗಳನ್ನು ಬಹಳಜಾಗ್ರತೆಯಿಂದ ಬಳಸಿಕೊಳ್ಳಬೇಕು[6].

ಮೇಲಾಗಿ 'ತನ್ನ ಸಂಶೋಧನೆಗಾಗಿ ತಾಂತ್ರಿಕ ಸಾಮಗ್ರಿಗಳ ಬಳಕೆ ಆಗುತ್ತದೆಯೇ ವಿನಾ, ಅದು ಇದೆ ಎಂಬ ಕಾರಣಕ್ಕಾಗಿ ಅದನ್ನು ಉಪಯೋಗಿಸುತ್ತಿಲ್ಲ ಎಂಬ ಅರಿವು ಸಂಶೋಧಕನಿಗೆ ಬೇಕಾಗುತ್ತದೆ. ಜೊತೆಗೆ ಉತ್ತಮ ಗುಣಮಟ್ಟದ ಕ್ಯಾಸೆಟ್ಟು, ಮತ್ತು ರೀಲುಗಳನ್ನು ಬಳಸಿಕೊಳ್ಳುವ ಆರ್ಥಿಕ ಭದ್ರತೆಯೂ ಅವನಿಗೆ ಬೇಕಾಗುತ್ತದೆ. ಕ್ಷೇತ್ರಕಾರ್ಯಕ್ಕೆಂದೇ ಸಿದ್ಧಪಡಿಸಲಾದ ಅತ್ಯಾಧುನಿಕವಾದ ಟೇಪರೆಕಾರ್ಡರ್‌ಗಳನ್ನು, ವೀಡಿಯೋಗಳನ್ನು ಯುಥಾನುಸಾರ ಬಳಸಿಕೊಳ್ಳುವ ಚೈತನ್ಯವೂ ಅವನಿಗೆ ಇರಬೇಕಾಗುತ್ತದೆ. ಇವೆಲ್ಲವುಗಳ ಪರಿಣಾಮಕಾರಿ ಬಳಕೆಗಾಗಿ ಆತ ಕೆಲವಾದರೂ ತರಬೇತಿ ಶಿಬಿರಗಳಲ್ಲಿ ಭಾಗವಹಿಸುವುದು ಒಳ್ಳೆಯದು.

4.2.4 ಯಾರನ್ನು ಸಂದರ್ಶಿಸಬೇಕು?

ಪ್ರದರ್ಶನಕ್ಕೆ ಸಂಬಂಧಿಸಿದ ಎಲ್ಲರನ್ನು ಸಂದರ್ಶಿಸಬೇಕೆನ್ನುವುದು ಇದಕ್ಕೆ ಸರಿಯಾದ ಉತ್ತರ. ಆದರೆ ಪ್ರಾಯೋಗಿಕವಾಗಿ ಇದು ಕಷ್ಟ ಸಾಧ್ಯ. ಹಾಗಾಗಿ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ನಿರೂಪಕರನ್ನು ಆಯ್ದುಕೊಳ್ಳುವುದು ಒಳ್ಳೆಯದು.

4.2.4.1 ಪ್ರದರ್ಶನದಲ್ಲಿ ಭಾಗಿಗಳಾದವರು.

4.2.4.2 ಪ್ರೇಕ್ಷಕರಾಗಿ ಭಾಗಿಗಳಾದವರು.

4.2.4.3 ವ್ಯವಸ್ಥಾಪನೆ ಮಾಡಿದವರು.

4.2.4.4 ಹತ್ತಿರ ಇದ್ದು ತಮ್ಮನ್ನು ತೊಡಗಿಸಿಕೊಳ್ಳದವರು.

4.2.4.5 ಇತರರು

ಈ ನಾಲ್ಕು ಹಂತಗಳಲ್ಲಿ ನಿರೂಪಕರನ್ನು ಆಯ್ದುಕೊಳ್ಳುವಾಗ ವಯಸ್ಸು, ಲಿಂಗ, ಜಾತಿ, ವೃತ್ತಿ, ಕಾಲ ಮತ್ತು ಪ್ರಾದೇಶಿಕ ವ್ಯತ್ಯಾಸಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಇವರಿಂದ ವಿಷಯಗಳನ್ನು ಸಂಗ್ರಹಿಸುವಾಗ ಅದು ಪೂರ್ವಯೋಜಿತವಾದರೂ, ಯೋಜಿತವಲ್ಲದ ರೀತಿಯಲ್ಲಿರಬೇಕು. ವಿಷಯ ಸಂಗ್ರಹಣೆ ಅತ್ಯಂತ ಸಹಜ ರೀತಿಯಲ್ಲಿ ನಡೆಯುವಂತೆ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕಾದದ್ದು ಸಂಶೋಧಕನ ಕರ್ತವ್ಯ.

4.2.5 ಕ್ಷೇತ್ರದಲ್ಲಿ ಹೇಗಿರಬೇಕು

ಕ್ಷೇತ್ರದಲ್ಲಿ ಸಂಶೋಧಕನು ಕೆಲವು ನೈತಿಕ ಕಟ್ಟುಪಾಡುಗಳಿಗೆ ಬದ್ಧನಾಗಿರಲೇ ಬೇಕಾಗುತ್ತದೆ. ಜನಪದ ಲೋಕವು ತನ್ನದೇ ಆದ ಸಮಗ್ರತೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಅದಕ್ಕೆ ಅದರದ್ದೇ ಆದ ನೀತಿ ಸಂಹಿತೆ ಇರುತ್ತದೆ. ಈ ನೀತಿ ಸಂಹಿತೆಗಿಂತ ಭಿನ್ನವಾಗಿ ಯೋಚಿಸುವ ಸಂಶೋಧಕನು ಸಹಜವಾಗಿ ಕ್ಷೇತ್ರದಲ್ಲಿ ಬಗೆಬಗೆಯ ಬಿಕ್ಕಟ್ಟುಗಳನ್ನು ಇದಿರಿಸಲೇಬೇಕಾಗುತ್ತದೆ. ಭಾರತದಂಥ ಜಾತಿ ನಿಷ್ಠ

ದೇಶದಲ್ಲಿ ಈ ಬಿಕ್ಕಟ್ಟಿನ ಸ್ವರೂಪ ಅತ್ಯಂತ ತೀವ್ರತರದ್ದಾಗಿರುತ್ತದೆ. ಸಂಶೋಧಕನು ಇಂಥ ಸಮಸ್ಯೆಯನ್ನು ಬಹಳ ತಾಳ್ಮೆ ಮತ್ತು ಸಂಯಮದಿಂದ ಪರಿಹರಿಸಿಕೊಳ್ಳ ಬೇಕಾಗುತ್ತದೆ. ಕ್ಷೇತ್ರಕಾರ್ಯ ಮುಗಿಸಿ ಹಿಂದೆ ಬಂದ ಅನಂತರ ಇನ್ನೊಮ್ಮೆ ಅದೇ ಕ್ಷೇತ್ರಕ್ಕೆ ಹೋಗಬೇಕಾಗುವ ಪ್ರಸಂಗ ಬಂದೀತು ಎಂಬ ಎಚ್ಚರ ಮಾತ್ರವಲ್ಲದೆ, ಬೇರೆಯವರೂ ಇದೇ ಸ್ಥಳದಲ್ಲಿ ಕ್ಷೇತ್ರ ಕಾರ್ಯ ಮಾಡುವವರಿರಬಹುದು ಎಂಬ ಅರಿವು ಸಂಶೋಧಕನಲ್ಲಿ ಸದಾ ಜಾಗೃತವಾಗಿರಬೇಕು.

ನಮ್ಮ ವೈಯಕ್ತಿಕ ಇಷ್ಟಾನಿಷ್ಟಗಳೇ ಕ್ಷೇತ್ರ ಕಾರ್ಯದಲ್ಲಿ ನಿರ್ಣಾಯಕ ಆಗಿ ಬಿಡಬಾರದು. ನನಗೆ ವೈಯಕ್ತಿಕವಾಗಿ ದೇವರಲ್ಲಿ ವಿಶ್ವಾಸವಿಲ್ಲ. ಭೂತಗಳು ಒಳ್ಳೆಯದು ಅಥವಾ ಕೆಟ್ಟದ್ದನ್ನು ಮಾಡುತ್ತವೆ ಎಂದು ನಾನು ನಂಬುವುದಿಲ್ಲ. ಆದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ನಾಸ್ತಿಕನಂತೆ ನಡೆದುಕೊಳ್ಳುವುದಿಲ್ಲ, ಹಾಗೆ ನಡೆದುಕೊಳ್ಳುವುದರಿಂದಾಗಿ ನನಗೆ ಕ್ಷೇತ್ರ ಕಾರ್ಯ ಮಾಡಲು ಅಸಾಧ್ಯವಾಗಬಹುದು ಮಾತ್ರವಲ್ಲ ಜನರು ಅಮೂಲ್ಯವಾದ ಮಾಹಿತಿಗಳನ್ನು ನನ್ನಿಂದ ಬಚ್ಚಿಡಬಹುದು. ಹಾಗಾಗಿಯೇ ನಾನು ನನ್ನ ವೈಚಾರಿಕ ನೆಲೆಗಳನ್ನೇ ಮುಂದು ಮಾಡಿಕೊಂಡು ಹೋಗದೆ ಜನರ ನೆಲೆಗಳಲ್ಲಿಯೇ ನಿಂತು ಕೆಲಸ ಮಾಡುತ್ತೇನೆ. ಈ ಬಗೆಯ ರಾಜೀಮನೋಭಾವ ಕ್ಷೇತ್ರಕಾರ್ಯದಲ್ಲಿ ಅಗತ್ಯ. ಅದೊಂದು ತಾಂತ್ರಿಕ ಅವಶ್ಯಕತೆ ಎಂಬುದನ್ನು ಮರೆಯಬಾರದು.

ಲೈಂಗಿಕ ವಿಚಾರಗಳಲ್ಲಿ ಜನರು ಬಹಳ ನಾಜೂಕಾಗಿರುತ್ತಾರೆ ಹಾಗಾಗಿ ಸಂಶೋಧಕನು ಕ್ಷೇತ್ರದಲ್ಲಿ ಲೈಂಗಿಕ ವಿಷಯಗಳಲ್ಲಿ ತುಂಬ ಜಾಗರೂಕನಾಗಿರಬೇಕು. ಅದು ಲೈಂಗಿಕ ಶೋಷಣೆಗೆ ಎಡೆ ಮಾಡಿಕೊಡಬಾರದು. ಅಥವಾ ಸಂಶೋಧಕನೇ ಲೈಂಗಿಕ ಶೋಷಣೆಗೆ ಒಳಗಾಗುವಂಥ ಪ್ರಸಂಗದಲ್ಲಿ ಬೀಳಬಾರದು.

ಜನರ ಭಾವನಾಲೋಕದ ಮೇಲೆ ಸಂಶೋಧಕನು ಧಾಳಿ ಇಡುವುದು ಅಪೇಕ್ಷಣೀಯವಲ್ಲ. ನಿರೂಪಕರನ್ನು ನೋವಿಗೀಡುಮಾಡುವಂಥ ಪ್ರಸಂಗಗಳನ್ನು ಆತ ನಿರ್ಮಾಣ ಮಾಡಿಕೊಳ್ಳಬಾರದು.

ಹೀಗೆ ಸಂಶೋಧಕನು ಕ್ಷೇತ್ರದಲ್ಲಿ ಶುಭ್ರ ಚಾರಿತ್ರ್ಯವನ್ನು ಉಳಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಆತನು ಸಾಮಾಜಿಕ ಕಾರ್ಯಕರ್ತನಂತೆಯೇ ಅಥವಾ ಇನ್ನಾವುದೋ ರೀತಿಯಲ್ಲಿ ವರ್ತಿಸಿದರೆ ಕ್ಷೇತ್ರಕಾರ್ಯ ಹಾಳಾಗುತ್ತದೆ.

5. ಕ್ಷೇತ್ರ ಕಾರ್ಯದ ಅನಂತರ

ಒಮ್ಮೆ ಶ್ರಮವಹಿಸಿ ಕ್ಷೇತ್ರ ಕಾರ್ಯವನ್ನು ಮುಗಿಸಿ ಹಿಂದೆ ಬಂದ ಸಂಶೋಧಕನು ಕ್ಷೇತ್ರದಲ್ಲಿ ತಾನು ಏನೇನನ್ನು ಸಂಗ್ರಹಿಸಿದ್ದೇನೆ ಎಂಬುದನ್ನು ತಕ್ಷಣವೇ ಪರಿಶೀಲಿಸಿಕೊಳ್ಳಬೇಕು. ಕ್ಷೇತ್ರ ಕಾರ್ಯದ ಅನುಭವಗಳು ಮರೆತುಹೋಗುವ ಮುನ್ನವೇ

ಅವನ್ನು ಪರಿಶೀಲಿಸಿ. ಅಗತ್ಯವಿರುವೆಡೆಗಳಲ್ಲಿ ಪರಿಷ್ಕರಿಸಿ, ಹೊಸ ಟಿಪ್ಪಣಿಗಳನ್ನು ಸೇರಿಸಿ, ಕೆಲಸಗಳಿಗೆ ಅಂತಿಮರೂಪವನ್ನು ಕೊಡಬೇಕು. ಈ ಹಂತದಲ್ಲಿ ಅನಿವಾರ್ಯವಾದರೆ ಇನ್ನೊಮ್ಮೆ ಕ್ಷೇತ್ರಕ್ಕೆ ಹಿಂದಿರುಗಿ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಕ್ಷೇತ್ರದಿಂದ ಬರುವಾಗ ಎಲ್ಲವೂ ನೆನಪಿನಲ್ಲಿ ಇದ್ದಂತಿರುತ್ತದೆ. ಆದರೆ ದಿನಕಳೆದಂತೆ ವಿವರಗಳು ಮರೆಯಾಗುತ್ತ ಹೋಗುತ್ತವೆ. ಹಾಗಾಗಿ ವಿವರಗಳು ಮರೆತು ಹೋಗುವ ಮುನ್ನ ಅವನ್ನು ದಾಖಲಿಸುವುದು ಅಗತ್ಯ. ಉಳಿದಂತೆ ಈ ಕೆಳಗಿನ ಅಂಶಗಳ ಬಗ್ಗೆ ಗಮನ ಹರಿಸುವುದು ಒಳ್ಳೆಯದು.[7]

5.1 ದಿನಚರಿ ಬರೆಯುವುದು

ಕ್ಷೇತ್ರಕಾರ್ಯದಲ್ಲಿ ತುಂಬ ಅಪೂರ್ವವಾದ ಖಾಸಗೀ ಅನುಭವಗಳಾಗಬಹುದು. ಅಂಥ ಅನುಭವಗಳು ಸಂಶೋಧನೆಯ ದೃಷ್ಟಿಯಿಂದ ಅಷ್ಟೇನೂ ಉಪಯುಕ್ತವಲ್ಲ. ಹಾಗಿದ್ದರೂ ಇಂಥ ಅನುಭವಗಳನ್ನು ಖಾಸಗೀ ದಿನಚರಿಗಳಲ್ಲಿ ದಾಖಲಿಸಿಡುವುದು ತುಂಬಾ ಮುಖ್ಯ. ಮುಂದಿನ ಸಾಂಸ್ಕೃತಿಕ ಅಧ್ಯಯನಕಾರರಿಗೆ ಇದು ಉಪಯುಕ್ತವಾಗಬಹುದು. ಕ್ಷೇತ್ರಕಾರ್ಯಕರ್ತರಿಗೆ ಅದು ಕೈಪಿಡಿಯಂತೆ ಮಾರ್ಗದರ್ಶನ ನೀಡಬಹುದು.

5.2 ಕೃತಜ್ಞತಾಭಾವ

ಕ್ಷೇತ್ರದಲ್ಲಿ ಸಹಕರಿಸಿದ ವ್ಯಕ್ತಿಗಳನ್ನು, ಮಾಹಿತಿ ನೀಡಿದ ನಿರೂಪಕರನ್ನು ಅತ್ಯಂತ ಕೃತಜ್ಞತೆಯಿಂದ ನೆನಪಿಸಿಕೊಳ್ಳುವುದು ಅಗತ್ಯ. ಮಾಹಿತಿಗಳನ್ನು ವರದಿ ಮಾಡುವಾಗ ಅವರ ಹೆಸರುಗಳನ್ನು ಉಲ್ಲೇಖಿಸುವುದು ಎಷ್ಟು ಅಗತ್ಯವೋ, ದೈನಂದಿನ ಬದುಕಿನಲ್ಲಿ ಅವರು ಇದಿರಾದಾಗ ಅವರನ್ನು ಮಾತಾಡಿಸುವುದು ಅಷ್ಟೇ ಅಗತ್ಯ. ಆ ಮಾಹಿತಿದಾರರಿಲ್ಲದೇ ಹೋಗಿದ್ದರೆ ತಾನು ಜಾನಪದ ತಜ್ಞನಾಗುವುದು ಸಾಧ್ಯವಿರಲಿಲ್ಲ ಎಂಬ ಭಾವ ಸಂಶೋಧಕನಲ್ಲಿ ಮನೆ ಮಾಡಿರಬೇಕು. ನಿರೂಪಕರನ್ನು ಅಧ್ಯಯನ ಸಂದರ್ಭದಲ್ಲಿ ಸರಕುಗಳಂತೆ ಉಪಯೋಗಿಸಿಕೊಳ್ಳಬಾರದು. ಸಾಮಾನ್ಯವಾಗಿ ನಾವು ಬಳಸುವ 'ಸಂಗ್ರಾಹಕ - ನಿರೂಪಕ'ಎಂಬ ಮಾತನ್ನೇ ಗಮನಿಸಬೇಕು. ಅವು ಏಕಮುಖ ಅರ್ಥವಿರುವ ಪದಗಳು. ಕ್ಷೇತ್ರಕಾರ್ಯದಲ್ಲಿ ಅವು ದ್ವಿಮುಖವಾಗಿ ಹರಿಯಬೇಕು. ನಿರೂಪಕರಿಗೆ ಆಕರ್ಷಕ ಸಂಭಾವನೆಯನ್ನು ನೀಡಬೇಕಾದದ್ದು ಸಂಶೋಧಕನ ನೈತಿಕ ಕರ್ತವ್ಯವೂ ಹೌದು. ಆ ಸಂಭಾವನೆಯು ಹಣದ ರೂಪದಲ್ಲಾಗಲೀ, ವಸ್ತುವಿನ ರೂಪದಲ್ಲಾಗಲೀ ಇರಬಹುದು. ಆದರೆ ವ್ಯಕ್ತಿಯನ್ನೂ ಅಧಃಪತನದತ್ತ ತಳ್ಳುವ ಮಾದಕ ವಸ್ತುಗಳನ್ನು ನೀಡಬೇಕಾಗಿಲ್ಲ. ನಮ್ಮ ಸ್ವಾರ್ಥಕ್ಕಾಗಿ ಜನರನ್ನು ಇನ್ನಷ್ಟು ಕೆಳಕ್ಕೆ ತಳ್ಳಬೇಕಾದ ಅವಶ್ಯಕತೆಯಿಲ್ಲ.

5.3 ಸಾಮಾಜಿಕ ಎಚ್ಚರ

ಭಾರತೀಯ ಸಂದರ್ಭದಲ್ಲಿ ಕ್ಷೇತ್ರಕಾರ್ಯಕರ್ತನಿಗೆ ಒಂದು ಬಗೆಯ ಸಾಮಾಜಿಕ ಎಚ್ಚರ ಬೇಕಾಗುತ್ತದೆ. ಇಲ್ಲಿ ವಿವಿಧ ಜಾತಿಯ ಜನರಿದ್ದಾರೆ, ಬಗೆಬಗೆಯ ಆಚರಣೆಗಳಿವೆ. ಇಲ್ಲಿ ಕ್ಷೇತ್ರದಲ್ಲಿ ಕಂಡದ್ದೆಲ್ಲವನ್ನು ವರದಿ ಮಾಡಲೇಬೇಕೆಂಬ ಹಠ ಒಳ್ಳೆಯದಲ್ಲ[8]. ತನ್ನ ವರದಿಯಿಂದ ಉಂಟಾಗಬಹುದಾದ ಪರಿಣಾಮದ ಕುರಿತೂ ಆತ ಯೋಚಿಸಿ ಕೊಳ್ಳಬೇಕಾಗುತ್ತದೆ. ಎಷ್ಟೋ ವರದಿಗಳು ಈಗಾಗಲೇ ಸಾಮಾಜಿಕವಾಗಿ ಕುಸಿದಿರುವ ಜನವರ್ಗವನ್ನು ಇನ್ನಷ್ಟು ಕುಸಿಯುವಂತೆ ಮಾಡಬಹುದು. ಇಂಥ ವಿಷಯಗಳಲ್ಲಿ ಪಾಶ್ಚಾತ್ಯ ವಿದ್ವಾಂಸರು ತೋರುವ ನಿರ್ಲಿಪ್ತತೆಯನ್ನು ನಾವು ತೋರುವಂತಿಲ್ಲ. ಸಂಶೋಧಕನು ಜನಪರವಾಗಿ ಯೋಚಿಸುವ ಮತ್ತು ಕೆಲಸ ಮಾಡುವ ಸಾಮಾಜಿಕ ಎಚ್ಚರವನ್ನು ಹೊಂದಿರಬೇಕಾಗುತ್ತದೆ. ಕೊನೆಗೂ ಎಲ್ಲ ಬಗೆಯ ಸಂಶೋಧನೆಗಳೂ ಮನುಕುಲದ ಪ್ರಗತಿಯೊಂದಿಗೆ ಒಂದಲ್ಲ ಒಂದು ಬಗೆಯಲ್ಲಿ ಸಂಬಂಧ ಹೊಂದಿರಲೇ ಬೇಕೆಂದು ಬಯುಸಬೇಕಾದದ್ದು ಸಂಶೋಧಕನ ಕರ್ತವ್ಯವಾಗಿದೆ.

ಇವಿಷ್ಟೂ ಆಧುನಿಕ ಕ್ಷೇತ್ರಕಾರ್ಯಕರ್ತನ ಮುಂದಿರುವ ಮಾರ್ಗದರ್ಶಕ ಸೂತ್ರಗಳು. ಇವನ್ನು ವ್ಯಕ್ತಿತ್ವದೊಳಗೆ ಅರಗಿಸಿಕೊಂಡಾಗ ಮಾತ್ರ ಕ್ಷೇತ್ರದಲ್ಲಿ ಗೆಲುವನ್ನು ಸಾಧಿಸಬಹುದು. ಈ ನಿಟ್ಟಿನಲ್ಲಿ ಮೇಲೆ ಹೇಳಿದ ವಿಧಾನದಲ್ಲಿ ಕ್ಷೇತ್ರಕಾರ್ಯ ನಡೆಸಿ ಯಶಸ್ವಿಯಾದ ಎರಡು ಉದಾಹರಣೆಗಳನ್ನು ಮುಂದೆ ನೀಡಲಾಗಿದೆ.

6. ಯಶಸ್ವೀ ಕ್ಷೇತ್ರಕಾರ್ಯದ ಎರಡು ಮಾದರಿಗಳು

ಕ್ಷೇತ್ರಕಾರ್ಯವೂ ಒಂದು ಬಗೆಯ ಕಲೆ. ಯಶಸ್ಸುಗಳಿಸುವುದು ಸುಲಭ ಸಾಧ್ಯವಲ್ಲ. ದಂತಗೋಪುರಗಳಲ್ಲಿ ಕುಳಿತು ಆದರ್ಶಗಳನ್ನು ಮಾತಾಡುವ ಮಂದಿಗಳಿಗೆ ಕ್ಷೇತ್ರಕಾರ್ಯದ ಕಷ್ಟ-ಸುಖಗಳು ಅರ್ಥವಾಗಲು ಸಾಧ್ಯವಿಲ್ಲ. ಅಪಾರವಾದ ಶ್ರಮ, ತಾಳ್ಮೆ ಸಂಯಮ, ಬುದ್ಧಿಮತ್ತೆಯಿಂದ ಕ್ಷೇತ್ರದಲ್ಲಿ ಹಿಡಿತ ಸಾಧಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ 1989ರಲ್ಲಿ ಫಿನ್ನಿಶ್ - ಇಂಡಿಯಾ ಜಾನಪದ ದಾಖಲಾತಿ ಯೋಜನೆಯನ್ವಯ ನಡೆದ ಕ್ಷೇತ್ರ ಕಾರ್ಯ ಮತ್ತು 1991ರಲ್ಲಿ ಉಡುಪಿಯ ರಂಗಕಲೆಗಳ ಅಧ್ಯಯನ ಕೇಂದ್ರದ ಕಾಡ್ಯನಾಟದ ಸಂಶೋಧಕ ಬಳಗವು ಎ.ವಿ.ನಾವಡ ಮತ್ತು ಗಾಯತ್ರಿ ನಾವಡರ ನೇತೃತ್ವದಲ್ಲಿ ನಡೆಸಿದ ಕ್ಷೇತ್ರಕಾರ್ಯವು ನಮಗೆ ಮಾರ್ಗದರ್ಶನ ನೀಡಬಲ್ಲವು.

6.1 ಫಿನಿಶ್ ಇಂಡಿಯಾ ಜಾನಪದ ದಾಖಲಾತಿ ಯೋಜನೆ ಮತ್ತು ಕ್ಷೇತ್ರಕಾರ್ಯ[9]

ಜಾನಪದವನ್ನು ವಿಶೇಷವಾಗಿ ಅಧ್ಯಯನ ಮಾಡಿದ, ಮತ್ತು ಅಧ್ಯಯನ ಮಾಡುತ್ತಿರುವ 30 ಮಂದಿ ತಜ್ಞರ ಸಮೂಹವೊಂದು, ಮೂರು ಉಪಗುಂಪುಗಳಲ್ಲಿ ಎರಡು ವಾರಗಳ ಕಾಲ ನಿರಂತರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ

20 ಗ್ರಾಮಗಳಲ್ಲಿ ನಡೆಸಿದ ಕ್ಷೇತ್ರ ಕಾರ್ಯವನ್ನು ಫಿನ್ನಿಶ್ - ಇಂಡಿಯಾ ಜನಪದ ದಾಖಲಾತಿ ಯೋಜನೆ ಎಂದು ಕರೆಯಲಾಗುತ್ತದೆ. (ಫೆಬ್ರುವರಿ 12-24, 1989). ಫಿನ್ಲೆಂಡಿನ ನಾರ್ಡಿಕ್ ಇನಸ್ಟಿಟ್ಯೂಟ್ ಆಫ್ ಫೋಕಲೋರ್ ನಿರ್ದೇಶಕರಾಗಿದ್ದ ಪ್ರೋ. ಲಾರಿ ಹಾಂಕೋ ಅವರು ಈ ಯೋಜನೆಯ ನಿರ್ದೇಶಕರು.

ಪ್ರೋ. ಲಾರಿ ಹಾಂಕೋ ಅವರು ತಮ್ಮ ಯೋಜನೆಯ ಉದ್ದೇಶವನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ.

,ಆಚರಣೆಗಳ ಉತ್ತಮ, ಸಮಗ್ರ ಮತ್ತು ಸಾಂದ್ರ ದಾಖಲಾತಿಯೇ ಈ ಯೋಜನೆಯ ಉದ್ದೇಶ. 'ಉತ್ತಮ' ಎಂದರೆ ಚಿತ್ರೀಕರಣ ಮತ್ತು ಧ್ವನಿಮುದ್ರಣದಲ್ಲಿ ತಾಂತ್ರಿಕ ಗುಣಮಟ್ಟವನ್ನು ಸಾಧಿಸುವುದು.'ಸಮುಗ್ರ' ಎಂದರೆ ಆಚರಣೆಯ ಆರಂಭ ಮತ್ತು ಪೂರ್ವಭಾವೀ ತಯಾರಿಯಿಂದ ತೊಡಗಿ ಕೊನೆಯ ಪ್ರೇಕ್ಷಕನೊಬ್ಬ ಅಲ್ಲಿಂದ ತೆರಳುವವರೆಗೆ ಅದರ ಎಲ್ಲ ಆಚರಣಾತ್ಮಕ ಪ್ರಕ್ರಿಯೆಗಳನ್ನು ಒಳಗೊಳ್ಳುವಂತೆ ಮತ್ತು ಪ್ರದರ್ಶನ ಸಂದರ್ಭದ ಸಂಪೂರ್ಣ ಮಾಹಿತಿಗಳನ್ನು ದಾಖಲಿಸುವುದು, ಪ್ರಮುಖ ಪ್ರದರ್ಶಕರ ಮತ್ತು ಕೆಲವು ಪ್ರೇಕ್ಷಕರನ್ನು ಸಂದರ್ಶಿಸುವುದು. 'ಸಾಂದ್ರ'ಎಂದರೆ ಬಹುಮುಖೀ ದಾಖಲಾತಿ (ಎರಡು ವೀಡಿಯೋಗಳು,ಹಲವು ಕೆಮರಾಗಳು ಮತ್ತು ಟೇಪ್‌ರೆಕಾರ್ಡರ್ಸ್ - ಇವುಗಳನ್ನು ವಿವಿಧ ಜಾಗ ಮತ್ತು ಆಯಾಯ ಕೋನಗಳಲ್ಲಿ ಅಳವಡಿಸಿ ಒಟ್ಟಿಗೇ ದಾಖಲಿಸುವುದು) ಮತ್ತು ಸಂದರ್ಶನ (ಸಂದರ್ಶನಗಳ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಮಾಹಿತಿಗಳನ್ನು ಪರೀಕ್ಷಿಸುವುದು ಮತ್ತು ಅಭಿಪ್ರಾಯ ಪ್ರಭೇದಗಳನ್ನು ತರಲು ಯತ್ನಿಸುವ್ವುದು.) (ಉದ್ಧೃತ, ಚಿನ್ನಪ್ಪಗೌಡ 1990:13-14.)

ಈ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಪ್ರೊ. ಲಾರಿ ಹಾಂಕೋ ಅವರು ಕ್ಷೇತ್ರಕಾರ್ಯ ಪೂರ್ವ ಸಿದ್ದತೆಗಾಗಿ ಎರಡು ಬಾರಿ ಉಡುಪಿಗೆ ಭೇಟಿ ನೀಡಿ ಸ್ಥಳೀಯ ಜವಾಬ್ದಾರಿಗಳನ್ನು ಹೊತ್ತುಕೊಳ್ಳುವ ಉಡುಪಿಯ ಸಂಸ್ಥೆಗಳೊಂದಿಗೆ ಚರ್ಚಿಸಿದ್ದರು. ಆತಿಥ್ಯ ನೀಡುವ ಧರ್ಮಸ್ಥಳದ ಡಿ. ವೀರೇಂದ್ರ ಹೆಗ್ಗಡೆಯವರೊಂದಿಗೂ ಮಾತುಕತೆ ನಡೆಸಿ, ಕ್ಷೇತ್ರಕಾರ್ಯದ ವ್ಯಾಪ್ತಿ ಕಾಲಾವಧಿ ಇತ್ಯಾದಿಗಳ ಬಗೆಗೆ ಚರ್ಚಿಸಿದ್ದಾರೆ. ಇದರ ಜೊತೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಜಾನಪದ ಸಂಸ್ಥೆಗಳನ್ನು ಸಂಪರ್ಕಿಸಿ, ಯೋಜನೆಯನ್ನು ವಿವರಿಸಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಿಕೊಂಡಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದ ವಿದ್ವಾಂಸರನ್ನು ಸಾಕಷ್ಟು ಮುನ್ನವೇ ಸಂಪರ್ಕಿಸಿ, ಅವರು ಕ್ಷೇತ್ರ ಕಾರ್ಯದಲ್ಲಿ ಭಾಗಿಗಳಾಗುವಂತೆ ಕೇಳಿಕೊಂಡಿದ್ದರು. ಕ್ಷೇತ್ರ ಕಾರ್ಯ ನಡೆಯಬೇಕಾದ ಸ್ಥಳಗಳ ಆಯ್ಕೆ, ಆ ಸ್ಥಳದ ಭೌಗೋಳಿಕ ವಿವರಗಳು, ಅಲ್ಲಿಂದ ಸಂಪರ್ಕ ಸಾಧನಗಳು, ಆಹಾರ ವ್ಯವಸ್ಥೆ, ಪ್ರಯಾಣಕ್ಕೆ ತೆಗೆದುಕೊಳ್ಳುವ ಅವಧಿ-ಇತ್ಯಾದಿಗಳನ್ನು ವಿಸ್ತೃತವಾಗಿ ಸಂಗ್ರಹಿಸಿಕೊಂಡು ವ್ಯವಸ್ಥಿತ ವೇಳಾಪಟ್ಟಿಯೊಂದನ್ನು ಸಿದ್ಧಮಾಡಿಡಲಾಗಿತ್ತು.

• ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಆಯಾ ಕ್ಷೇತ್ರದಲ್ಲಿ ಪರಿಣತರಾದವರನ್ನು ಆಯಾ ಕೆಲಸಗಳಿಗೆ ಯೋಜಿಸಲಾಗಿತ್ತು. ವೀಡಿಯೋ ಕೆಮರಾಗಳ ತಜ್ಞರಿಂದ ವೀಡಿಯೋ ಚಿತ್ರೀಕರಣ, ಸಂದರ್ಶನ ನಡೆಸುವವರು ಟೇಪರೆಕಾರ್ಡರ್‌ಗಳ ಮೂಲಕ ಸಂದರ್ಶನವನ್ನು ಧ್ವನಿಮುದ್ರಣ ಮಾಡಿಕೊಳ್ಳುವುದು, ಕ್ಯಾಮರಾ ತಜ್ಞರು ಕಪ್ಪು-ಬಿಳುಪು ವರ್ಣ ಪಾರದರ್ಶಿಕೆ ಮತ್ತು ವರ್ಣ ಚಿತ್ರಗಳನ್ನು ತೆಗೆದುಕೊಳ್ಳುವುದು, ಕೇಳಿದ ನೋಡಿದ ವಿವರಗಳನ್ನು ಟಿಪ್ಪಣಿ ಪುಸ್ತಕಗಳಲ್ಲಿ ಬರೆದುಕೊಳ್ಳುವುದು. ನಕ್ಷೆ ಮತ್ತು ರೇಖಾಚಿತ್ರಗಳನ್ನು ಬಿಡಿಸಿಕೊಳ್ಳುವುದು. ಪ್ರೇಕ್ಷಕರ ಪ್ರತಿಕ್ರಿಯೆಗಳನ್ನು ದಾಖಲಿಸಿಕೊಳ್ಳುವುದು ಹೀಗೆ ಗುಂಪಿನ ಎಲ್ಲ ಸದಸ್ಯರು ಎಲ್ಲ ಕೆಲಸಗಳನ್ನು ಹಂಚಿಕೊಂಡು, ಯಾವ ಒಂದು ವಿವರಗಳನ್ನು ಬಿಟ್ಟು ಹೋಗದಂತೆ ಕೆಲಸ ಮಾಡಿದ್ದರು. ಅವರಲ್ಲಿ ಹಲವರು ಸ್ವತಂತ್ರವಾಗಿ, ಕೆಲವೊಮ್ಮೆ ಸಹಾಯಕರಾಗಿ ಯೋಜನೆಯ ಕೇಂದ್ರ ಉದ್ದೇಶಕ್ಕೆ ಬದ್ಧವಾಗಿ ದುಡಿಯುತ್ತಿದ್ದರು. ಇವೆಲ್ಲದರ ಪರಿಣಾಮವಾಗಿ 76 ಗಂಟೆಯ ಅವಧಿಯ ವೀಡಿಯೋ ಚಿತ್ರಣ, 160 ಗಂಟೆಗಳ ಆಡಿಯೊ ಧ್ವನಿಮುದ್ರಣ, 5,500 ಕ್ಕೂ ಹೆಚ್ಚು ಛಾಯಚಿತ್ರಗಳು, 600ಕ್ಕೂ ಹೆಚ್ಚು ಮಾಹಿತಿ ಸಂಗ್ರಹ ಪಟ್ಟಿಕೆ (Field Card), ಹಲವು ಪುಸ್ತಕಗಳಲ್ಲಿ ನಕ್ಷೆ ಮತ್ತು ವಿವರಗಳನ್ನು ದಾಖಲಿಸಲಾಯಿತು. ಹಲವರು ಅದರಲ್ಲಿ ಭಾಗವಹಿಸುವುದರಿಂದ ವರದಿ ಮಾಡುವ ಸಂದರ್ಭದಲ್ಲಿ ಮಾಹಿತಿಗಳನ್ನು ತಿರುಚಲು ಅವಕಾಶವೇ ಇಲ್ಲವಾಯಿತು.

ಹೀಗೆ ಫಿನ್ನಿಶ್ - ಇಂಡಿಯಾ ಯೋಜನೆಯು ಕ್ಷೇತ್ರಕಾರ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಸಾಧನೆಯನ್ನು ಮಾಡಿದೆ[10].

6.2 ಕಾಡ್ಯನಾಟ- ಪಠ್ಯ ಮತ್ತು ಪ್ರದರ್ಶನ

ಎ. ವಿ. ನಾವಡ ಮತ್ತು ಗಾಯತ್ರಿ ನಾವಡರ 'ಕಾಡ್ಯನಾಟ-ಪಠ್ಯ ಮತ್ತು ಪ್ರದರ್ಶನ ಕೃತಿಯು (1992)ಕ್ಷೇತ್ರಕಾರ್ಯದ ದೃಷ್ಟಿಯಿಂದ ಇತ್ತೀಚಿನ ಅತ್ಯಂತ ಮಹತ್ವದ ಕೃತಿಯಾಗಿದೆ. ಸುಮಾರು 9 ಜನ ವಿದ್ವಾಂಸರು ಬೇರೆ ಬೇರೆ ಹಂತಗಳಲ್ಲಿ ದುಡಿದು ಸಿದ್ಧಪಡಿಸಿದ ಈ ಕೃತಿಯನ್ನು ಹಲವು ಕಾರಣಗಳಿಗಾಗಿ ಕ್ಷೇತ್ರಕಾರ್ಯಕರ್ತರು ಗಮನಿಸಬೇಕು.

ನಾವಡ ದಂಪತಿಗಳು ಕಾಡ್ಯನಾಟವನ್ನು ವಿವಿಧ ತಾಂತ್ರಿಕ ಸಾಮಗ್ರಿಗಳ ಮೂಲಕ ದಾಖಲಿಸುವ ಮುನ್ನವೇ ಕಾಡ್ಯನಾಟ ನಡೆಯುವ ಪ್ರದೇಶಕ್ಕೆ ತೆರಳಿ, ಪೂರ್ವಭಾವಿ ಸಿದ್ಧತೆಗಳನ್ನು ಮಾಡಿದ್ದರು. ಕಾಡ್ಯನಾಟಕ್ಕೆ ಸಂಬಂಧಿಸಿದ ಭಿನ್ನಪಾಠಗಳನ್ನು ಮೊದಲೇ ದಾಖಲಿಸಿಕೊಂಡದ್ದಲ್ಲದೆ, 1981 ರಷ್ಟು ಹಿಂದೆ ನಡೆದ ಕಾಡ್ಯನಾಟದ ವಿವರಗಳನ್ನು ಕಷ್ಟಪಟ್ಟು ಸಂಗ್ರಹಿಸಿದ್ದಾರೆ. ದೊರೆತ ಶಾಬ್ದಿಕ ಪಠ್ಯ ಮತ್ತು ವಿವರಣಾತ್ಮಕ ಮಾಹಿತಿಗಳಿಂದ ಕುತೂಹಲ ಕೆರಳಿಸಿಕೊಂಡು ನಾವಡ ದಂಪತಿಗಳು ಅಂತಿಮವಾಗಿ 1991ರ ಮಾರ್ಚ್

30 ರಿಂದ ಏಪ್ರಿಲ್ 2 ರವರೆಗೆ ನಾಲ್ಕೂರು ಎಂಬಲ್ಲಿ ನಡೆಯುವ ಕಾಡ್ಯನಾಟದ ಸಮಗ್ರ ದಾಖಲೀಕರಣಕ್ಕೆ ಮಾನಸಿಕವಾಗಿ ಸಿದ್ಧವಾಗಿದ್ದರು.

ಕ್ಷೇತ್ರದಲ್ಲಿ ಬಹುರೂಪಿ ದಾಖಲೀಕರಣ ವಿಧಾನವನ್ನು ಅವರು ಅಳವಡಿಸಿಕೊಂಡಿದ್ದಾರೆ. ಸುಮಾರು 15ಗಂಟೆಗಳ ವೀಡಿಯೋ 24ಗಂಟೆಗಳ ಆಡಿಯೋ, ನೂರಾರೂ ಛಾಯಾಚಿತ್ರಗಳು ಮತ್ತು ಅಪಾರವಾದ ಟಿಪ್ಪಣಿಗಳನ್ನು ಕ್ಷೇತ್ರದಲ್ಲಿ ಸಂಗ್ರಹಿಸಲಾಯಿತು. ಸಂಗ್ರಹಿಸಿದ್ದನ್ನು ವರದಿ ಮಾಡುವ ಹಂತದಲ್ಲಿ ಕಾಡ್ಯನ ಬಗ್ಗೆ ದೊರಕಿದ ಅನೇಕ ಮಾಹಿತಿಗಳಿಗಾಗಿ ಮತ್ತೆ ಕ್ಷೇತ್ರಕಾರ್ಯ ನಡೆಸಲಾಯಿತು. ಈ ಕ್ಷೇತ್ರಕಾರ್ಯವು ಎಷ್ಟು ಸೂಕ್ಷ್ಮವಾಗಿ ನಡೆದಿದೆ ಎನ್ನುವುದನ್ನು ಸಾಬೀತುಪಡಿಸಲು ಕೃತಿಯ ಕೊನೆಯಲ್ಲಿ ಕೊಡಲಾದ 'ಕಾಡ್ಯನಾಟದ ದಿನವಹಿ ವೇಳಾಪಟ್ಟಿ'(ಪುಟ :೧೭೯-೧೮೨)ಯೇ ಸಾಕ್ಷಿ. ನಾಲ್ಕು ದಿನಗಳಲ್ಲಿ ಏನೇನು ನಡೆಯಿತು ಎಂಬುದನ್ನು ಇಲ್ಲಿ ಹಂತಹಂತವಾಗಿ ವಿವರಿಸಲಾಗಿದೆ.

ಕೃತಿಯ ಕೊನೆಯಲ್ಲಿ ಕಾಡ್ಯನಾಟ ಸಂಶೋಧಕ ಬಳಗ ಪಟ್ಟಿ ನೀಡಿರುವುದಲ್ಲದೆ ದಾಖಲಾತಿ ಮಾಹಿತಿಗಳನ್ನು (ವೀಡಿಯೊ, ವರ್ಣಪಾರದರ್ಶಿಕೆ. ಕಪ್ಪು-ಬಿಳಿಪು ಚಿತ್ರಗಳ, ಮಾಹಿತಿ)ನೀಡಲಾಗಿದೆ. ಈ ಕೃತಿಗೆ ಬರೆದ ಮುನ್ನಡಿಯಲ್ಲಿ ಡಾ. ಬಿ. ಎ. ವಿವೇಕ ರೈ ಅವರು ಇಂಥ ಕೆಲಸಗಳ ಮಹತ್ವವನ್ನು ಬಹಳ ಸರಿಯಾಗಿಯೇ ಸಂಗ್ರಹಿಸಿದ್ದಾರೆ. ಅವರು ಮಾತುಗಳು "ಇಂತಹ ಬಹುಮುಖೀ ಮತ್ತು ಸಮಗ್ರರೂಪದ ಸಂಶೋಧನೆಯ ಕೆಲಸ ಕನ್ನಡ ಜಾನಪದದಲ್ಲಿ ಪೂರ್ಣ ಪ್ರಮಾಣದಲ್ಲಿ ಈವರೆಗೆ ನಡೆದಿಲ್ಲ, ಈ ಕಾರಣಕ್ಕಾಗಿಯೇ ಕಾಡ್ಯನಾಟದ ಅಧ್ಯಯನದ ಈ ಪ್ರಯತ್ನವನ್ನು ಕನ್ನಡ ಜನಪದ ಸಂಶೋಧನೆಯಲ್ಲಿಯೇ ಒಂದು ಹೊಸ ಆಯಾಮವೆಂದು ನಾನು ಭಾವಿಸುತ್ತೇನೆ".

ಹೀಗೆ ಕ್ಷೇತ್ರ ಕಾರ್ಯದ ದೃಷ್ಟಿಯಿಂದ ಇದೊಂದು ಮಾದರಿ ಕೃತಿಯಾಗಿದೆ.

ಕೊನೆ ಟಿಪ್ಪಣಿಗಳು.

1. ಇಂಥ ವಿಚಾರಗಳ ಬಗೆಗೆ ವಿಸ್ತೃತವಾಗಿ ಚರ್ಚಿಸಿದ ಕೆನೆತ್ ಎಸ್. ಗೋಲ್ಡ್ ಸ್ಟೈನ್ ಹೇಳಿದ ಮಾತುಗಳು ಇಂತಿವೆ.: "collecting initiated with out careful problem statement is usually arbitrary, unorganised perfunctory and wasteful" 1964.17

2. ಡಾ. ಕೆ. ಚಿನ್ನಪ್ಪಗೌಡರು 'ಭೂತಾರಾಧನೆ ಜಾನಪದೀಯ ಅಧ್ಯಯನ'ಎಂಬ ಹೆಸರಿನ ತಮ್ಮ ಮಹಾಪ್ರಬಂಧದ ಅನುಬಂಧದಲ್ಲಿ ತಾವು ಬಳಸಿದ ಪ್ರಶ್ನಾವಳಿಯ 4 ಮಾದರಿಗಳನ್ನು ನೀಡಿದ್ದಾರೆ. 'ಭೂತಾರಾಧನೆ'ಗೆ ಸಂಬಂಧಿಸಿದಂತೆ ಅವರು ಭೂತಕಟ್ಟುವ ಕಲಾವಿದರ ಸಂದರ್ಶನ ಪ್ರಶ್ನಾವಳಿ, ಭೂತಗಳ ಮಾನಿ,

ಪೂಜಾರಿಗಳ ಸಂದರ್ಶನ ಪ್ರಶ್ನಾವಳಿ, ಭೂತಕಟ್ಟುವ ಜನಾಂಗಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮೀಕ್ಷೆ ಪ್ರಶ್ನಾವಳಿ ಮತ್ತು ಭೂತಾರಾಧನೆಯ ಮುಕ್ತೇಸರ, ಯಜಮಾನರ ಸಂದರ್ಶನದ ಪ್ರಶ್ನಾವಳಿಗಳನ್ನು ಸಾಕಷ್ಟು ವಿಸ್ತೃತವಾಗಿ ಸಿದ್ಧಪಡಿಸಿದ್ದಾರೆ. ಇಷ್ಟು ದೀರ್ಘವಾದ ಪ್ರಶ್ನಾವಳಿಗಳನ್ನು ಕ್ಷೇತ್ರದಲ್ಲಿ ಭರ್ತಿ ಮಾಡಿಕೊಳ್ಳಲು ಸಾಕಷ್ಟು ತಾಳ್ಮೆ ಮತ್ತು ಸಂಯಮ ಬೇಕು.

3. 1990ರಲ್ಲಿ ಕರ್ನಾಟಕ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳ ವೀಡಿಯೋ ದಾಖಲಾತಿಗಾಗಿ ನಾನು ಮತ್ತು ಡಾ. ಚಿನ್ನಪ್ಪ ಗೌಡರು ಭೂತಾರಾಧನೆಯನ್ನು ಏರ್ಪಡಿಸಿದ್ದರು. ಅರ್ಧ ದಿವಸದ ಪೂರ್ತಿ ಚಿತ್ರೀಕರಣ ನಡೆಸಿ, ರಾತ್ರಿ ಅದನ್ನು ಪರೀಕ್ಷಿಸಿ ನೋಡಿದಾಗ ಅದರೊಳಗೆ ಏನೂ ಇರಲಿಲ್ಲ, ತಂತ್ರಜ್ಞಾನದ ಬಗೆಗೆ ಮಾಹಿತಿ ಇಲ್ಲದ ಅಧಿಕಾರಿಗಳಿಂದಾಗಿ ಹಣ, ಸಮಯ ಎರಡೂ ನಷ್ಟವಾಯಿತು. ಕ್ಷೇತ್ರಕಾರ್ಯದಲ್ಲಿ ಹೀಗೆ ಮುರ್ಖರಾಗಿಬಿಟ್ಟರೆ, ನಾವು ಶಾಶ್ವತವಾಗಿ ಮಾಹಿತಿಗಳನ್ನು ಕಳೆದು ಕೊಂಡು ಬಿಡುತ್ತೇವೆ. ಹಾಗಾಗದಂತೆ ಜಾಗ್ರತೆ ವಹಿಸುವುದು ಅವಶ್ಯಕ.

4. ಕ್ಷೇತ್ರ ಕಾರ್ಯದಲ್ಲಿ ಸಂವಹನ ಸಾಧಿಸಬೇಕಾದರೆ ಸಂಶೋಧಕ ವಹಿಸಬೇಕಾದ ಎಚ್ಚರದ ಬಗೆಗೆ ಬ್ರಿಗ್ಸ್ ಎಂಬ ವಿದ್ವಾಂಸರು ಸಾಕಷ್ಟು ದೀರ್ಘವಾಗಿ ಚರ್ಚಿಸಿದ್ದಾನೆ. ನೋಡಿ: Briggs1986.ತುಳುನಾಡಿನಲ್ಲಿ ಕಳೆದ 22ವರ್ಷಗಳಿಂದ ಕ್ಷೇತ್ರಕಾರ್ಯ ನಡೆಸುತ್ತಿರುವ ಡಾ. ಪೀಟರ್ ಜೆ. ಕ್ಲಾಸ್ ಅವರೂ ಜನಸಂಪರ್ಕವನ್ನು ಸಾಧಿಸಿಕೊಂಡ ರೀತಿ ಇಲ್ಲಿ ಉಲ್ಲೇಖಾರ್ಹ. ಸಾಮಾನ್ಯ ಜನರ ಹಾಗೆ ಬದುಕುವ ವ್ಯವಹರಿಸುವ ಅವರನ್ನು ಜನರು ತಮ್ಮವನೆಂದೇ ಭಾವಿಸುತ್ತಾರೆ.

5. ಮದುವೆಯಲ್ಲಿ ತಾಳಿ ಕಟ್ಟುವಾಗಲೇ ಫೋಟೋ ತೆಗೆಯಲಾಗದವರು, ಅನಂತರ ಪುನಃ ತಾಳಿಕಟ್ಟುವಂತೆ ಒತ್ತಾಯಿಸಿ, ಫೋಟೋ ತೆಗೆಸುವುದು ಈಚಿನ ದಿನಗಳಲ್ಲಿ ಸಾಮಾನ್ಯವಾದ ಸಂಗತಿ, ಇಂಥದ್ದನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಬೇಕು.

6. ಕ್ಯಾಮರಾದ ಫ್ಲ್ಯಾಷ್ ಮದುವೆಯ ಮೇಲೆ ಬೀಳುವ ಪರಿಣಾಮದ ಕುರಿತು ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಕರ್ವಾಲೋ (1983)ಕಾದಂಬರಿಯಲ್ಲಿ ತುಂಬ ಸೊಗಸಾದ ವಿವರಗಳನ್ನು ನೀಡಿದ್ದಾರೆ. ನೋಡಿ ಪೂರ್ಣಚಂದ್ರ ತೇಜಸ್ವಿ (1983:65)

7. ಇಂಥ ದಿನಚರಿಗಳಲ್ಲಿ ನಿಜವಾದ ಹೆಸರುಗಳೇ ದಾಖಲಾಗಬೇಕೆಂದೇನೂ ಇಲ್ಲ, ಜನರ ಭಾವನೆಗಳಿಗೆ ನೋವಾಗದಂತೆ, ಹೆಸರುಗಳನ್ನು ಬದಲಿಸಿ, ಅನುಭವಗಳನ್ನು ದಾಖಲಿಸಬಹುದು. ಹಾಗೆ ಬದಲಿಸಿ ದಾಖಲಿಸಿದಾಗ ಅದರ ಬಗೆಗೆಯೂ ಮಾಹಿತಿ ಇರುವುದು ಅವಶ್ಯಕ.

8. ‘ಕಂಬುಲ’ದ ಬಗ್ಗೆ ನಾನು ಕೆಲಸ ಮಾಡುವಾಗ ಇಂಥ ಸಮಸ್ಯೆಗಳನ್ನು ಇದಿರಿಸಿದ್ದೇನೆ. ಕ್ಷೇತ್ರಕಾರ್ಯದಲ್ಲಿ ನಾನು ಸಂಗ್ರಹಿಸಿದ ವಿವರಗಳೆಲ್ಲವನ್ನು ನಾನಲ್ಲಿ ದಾಖಲಿಸಿಲ್ಲ. ಜೊತೆಗೆ ಚಿತ್ರಗಳನ್ನು ಪ್ರಕಟಣೆಯ ಸಂದರ್ಭದಲ್ಲಿ ಬಳಸಿಕೊಂಡಿಲ್ಲ. ಅದು ಕೊರಗರಿಗೆ ಗೌರವ ತರುವಂಥದ್ದಲ್ಲ ಎಂಬ ಅರಿವಿನಲ್ಲಿಯೇ ಹಾಗೆ ಮಾಡಬೇಕಾಯಿತು.

9. ಈ ಯೋಜನೆಯ ಬಗೆಗೆ ಡಾ. ಕೆ. ಚಿನ್ನಪ್ಪಗೌಡರು ವಿಸ್ತೃತವಾದ ವರದಿಯೊಂದನ್ನು ಸಿದ್ಧಪಡಿಸಿ, ಮಾರ್ಚ್ 10. 1990ರಂದು ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ನಡೆದ ವಿಚಾರ ಸಂಕಿರಣ ದಲ್ಲಿ ಮಂಡಿಸಿದ್ದಾರೆ. ಪ್ರಸ್ತುತ ನೀಡಲಾದ ವಿವರಗಳನ್ನು ಆ ವರದಿಯಿಂದಲೇ ಆಯ್ದುಕೊಳ್ಳಲಾಗಿದೆ.

10. ಪ್ರೊ. ಲಾರಿ ಹಾಂಕೋ ಅವರು ಡಾ. ಬಿ. ಎ. ವಿವೇಕ ರೈ ಮತ್ತು ಡಾ. ಕೆ. ಚಿನ್ನಪ್ಪಗೌಡರ ಸಹಯೋಗದಲ್ಲಿ ಸಿರಿ ಜಾತ್ರೆಗೆ ಸಂಬಂಧಿಸಿದಂತೆ ಇನ್ನೂ ವೈಜ್ಞಾನಿಕವಾದ ರೀತಿಯ ಕ್ಷೇತ್ರ ಕಾರ್ಯವನ್ನು ನಡೆಸಿದ್ದಾರೆ; ನಡೆಸುತ್ತಿದ್ದಾರೆ. ಇದರಲ್ಲಿ ಸಿರಿ ಜಾತ್ರೆಗೆ ಸಂಬಂಧಿಸಿದಂತೆ ಗೋಪಾಲ ನಾಯಕ ಎಂಬುವರನ್ನು ಜಾತ್ರೆಗೆ ಮುನ್ನವೇ ಸಾಕಷ್ಟು ವಿಸ್ತೃತವಾಗಿ ಪರಿಚರಿಯಿಸಿಕೊಳ್ಳಲಾಯಿತು. ಅವರಿಂದ ಸಿರಿಪಾಡ್ದನದ ಪೂರ್ಣಪಾಠವನ್ನು ಜಾತ್ರೆಗೆ ಮುನ್ನವೇ ಸಂಗ್ರಹಿಸಲಾಯಿತು. ಅನಂತರ ಜಾತ್ರೆಯ ದಿವಸ ಅವರೇ ಹೇಳಿದ ಪಾಡ್ದನದ ಭಾಗವನ್ನು ಸಂಗ್ರಹಿಸಲಾಯಿತು. ಮುಂದಿನ ದಿನಗಳಲ್ಲಿ ಪ್ರದರ್ಶನದ ಸಂದರ್ಭದಲ್ಲಿ ಗೋಪಾಲ ನಾಯಕರು ಹೇಳಿದ ಪಾಠಕ್ಕೂ ಇರುವ ವ್ಯತ್ಯಾಸಗಳನ್ನು ಗುರುತು ಹಾಕಿಕೊಂಡು, ಅದಕ್ಕೆ ಕಾರಣಗಳನ್ನು ಗೋಪಾಲ ನಾಯಕರು ಮೂಲಕವೇ ಕೇಳಿ ತಿಳಿದುಕೊಳ್ಳಲಾಯಿತು. ಅಧ್ಯಯನದ ಸಂದರ್ಭಗಳಲ್ಲಿ ಎದುರಾದ ಸಮಸ್ಯೆಗಳಿಗೆ ಮತ್ತೆ ಗೋಪಾಲ ನಾಯಕರನ್ನೇ ಕೇಳಿಕೊಳ್ಳಲಾಯಿತು. ಈ ಬಗೆಯ ಕೆಲಸಗಳಿಗೆ ಬಹು ಬಗೆಯ ತಾಂತ್ರಿಕ ಸಾಮಗ್ರಿಗಳನ್ನು ಬಳಸಿಕೊಳ್ಳಲಾಯಿತು. ಹೀಗೆ ಒಬ್ಬ ನಿರೂಪಕರನ್ನು ಗಮನದಲ್ಲಿ ಇರಿಸಿಕೊಂಡು ಎರಡು ವರ್ಷಕ್ಕೂ ಹೆಚ್ಚು ಕಾಲ ಕ್ಷೇತ್ರಕಾರ್ಯ ನಡೆಸಲಾಗಿದೆ. ಅಪಾರ ತಾಳ್ಮೆ ಮತ್ತು ಸಂಯಮದಿಂದ ನಡೆಸಿದ ಈ ಬಗೆಯ ಕ್ಷೇತ್ರಕಾರ್ಯ ಅತ್ಯಾಧುನಿಕವಾದುದು. ಈ ಕೆಲಸದ ಬಗೆಗಿನ ವರದಿ ಇನ್ನು ಪ್ರಕಟವಾಗಿಲ್ಲ. ಪ್ರಕಟವಾದಾಗ ಅದೊಂದು ಐತಿಹಾಸಿಕ ಮಹತ್ವದ ಕೃತಿಯಾಗಿ ಹೆಸರು ಮಾಡಲಿದೆ.

ಗ್ರಂಥಋಣ

1. ಚಿನ್ನಪ್ಪಗೌಡ ಕೆ. 1990,ಫಿನ್ನಿಶ್ - ಇಂಡಿಯಾ ಜನಪದ ದಾಖಲಾತಿ ಯೋಜನೆ ಮತ್ತು ಕ್ಷೇತ್ರ ಕಾರ್ಯದ ಹೊಸ ಸಾಧ್ಯತೆಗಳು(ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಮಂಡಿಸಿದ ಪ್ರಬಂಧ) ಬಿ. ಆರ್. ಪ್ರಾಜೆಕ್ಟ್.

2. ಸತ್ಯನಾಥ ಟಿ.ಎಸ್.1988,ಕನ್ನಡ ಜಾನಪದ ಕೆಲವು ಮುಖಗಳು; ಮೈಸೂರು: ಶಾರದಾ ಪ್ರಕಾಶನ.

3. ಹಿರಿಯಣ್ಣ ಅಂಬಳಿಕೆ. 1984, ಕ್ಷೇತ್ರಕಾರ್ಯದ ವ್ಯಾಪ್ತಿ ಮತ್ತು ಅಧ್ಯಯನ ಜಾನಪದದ ಕೆಲವು ವಿಚಾರಗಳು, ಮೈಸೂರು: ಪ್ರಜ್ವಲ ಪ್ರಕಾಶನ.

4. Bascom W.R 1953, Folklore and Anthropology; Journal of American Folklore - 66.

5. Bauman, Richard 1962, Y.L. Cahan's Instructions on the collecting of Folklore; New York Folklore Quarterly18.

6. Bayard, Samuel P 1953, The materials of Folklore: Journal of American Folklore-66.

7. Burne C.S. 1902, The collection of Folklore ; Folklore -13 London.

8. Crooke, william 1902, The collection of Folklore; Folklore - 13 London.

9. Dorson, Richard M. 1964, Introduction, 'collecting oral Folklore in the united States ; Chicago.

10. Dundes, Alan 1962, On the psychology of collecting Folklore; Tennessle Folklore Society Bulletin 28.

11. Goldstein S. Kenneth 1964, A guide for field workers in Folklore; Pennsylvania ; Folklore Associates INC.

12. Hersokovits M.J. 1950, The Hypothetical situation : A Technique of field Research ; South Western Journal of Anthropology-6.

13. Jones, Louis C,1946, A student Guide to collecting Folklore; Newyork Folklore Quarterly - 2

14. Kluckhohm, Florence -1940,The participant observer Technique in small communities, American Journal of Sociology-46.

15. Leach Meo Edward, 1962, Problem of collecting oral literature; publications of the modern language Association 77.

16. Lard, Albert B, 1960, The Singer of tales, Cambridge, Mass.

17. Mead, Margaret, 1933, More comprehensive Field Methods American Anthropologist - 35.

18. Paul, Benj, D. 1953, Interview. Techiques and Field Relationships, Anthropology Today. chicogo.

19. Whyte, W.F. 1951,"Observational Field- work Methods" Reserach methods in social relations.
(Tol : Jahoda Metal) Volume 2, NewYork.

ಮಂಟಪ ಮಾಲೆ

೧

ಕನ್ನಡದಲ್ಲಿ ಎಲ್ಲ ಬಗೆಯ ಅರಿವನ್ನೂ ಬೆಳೆಸುವುದು ನಮ್ಮ ವಿಶ್ವವಿದ್ಯಾಲಯದ ಉದ್ದೇಶ. ನಾವು ನಮ್ಮನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು, ಹಂಪಿಯಲ್ಲಿ ಪ್ರತಿವಾರವೂ ಮಂಟಪವೆಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭ ದಾಯಕವಾಗಬಹುದೆಂಬ ನಂಬಿಕೆಯಿಂದ ಕಡಮೆ ಬೆಲೆಯ ಕಿರು ಪುಸ್ತಿಕೆಗಳ ರೂಪದಲ್ಲಿ ನಿಮ್ಮ ಕೈಗಿಡುತ್ತಿದ್ದೇವೆ. ಈ ಪುಸ್ತಿಕೆ ನಿಮಗೆ ಉಪಯೋಗವಾದರೆ ನಮಗೆ ಸಂತೋಷ.

— ಚಂದ್ರಶೇಖರ ಕಂಬಾರ
ಕುಲಪತಿಗಳು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩ ೨೭೭